ಸಂಪುಟ : 8 ಸಂಚಿಕೆ 305 ಪುಟ : 4 ಬೆಲೆ : 3.00 ಬುಧವಾರ ಜನವರಿ 17, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 305 Pages : 4 Price : 3.00 Wednesday JANUARY 17, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಜನವರಿ 17ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 15,16,17 ಶಹಾಪುರ ಪೇಟೆ, ಡಿಸಿ ಮಿಲ್ ರೋಡ್, ಜವಳಗಲ್ಲಿ, ಭಜಂತ್ರಿ ಓಣಿ, ಮೀನಿನ ಮಾರ್ಕೆಟ್ ರೋಡ್, ಮಹೇಂದ್ರಕರ್ ಸರ್ಕಲ್ ಲೈನ್, ಗಾಂಧಿ ಸರ್ಕಲ್ ಕೆಲವು ಭಾಗಗಳು.

ವಾರ್ಡ್ ನಂ. 31, 32 ಸಿಕ್ಕಿಲಗಾರ ಓಣಿ, ಭಜಂತ್ರಿ ಓಣಿ, ದಾಸರ ಓಣಿ, ಕೋಳಿಕೇರಿ, ರಂಗನವಾಡ ಜೀನ್ ಲೈನ್, ಗುಜ್ಜರಬಸ್ತಿ, ಹಳೇ ಕಚೇರಿ ರೋಡ್, ತ್ರಿಕೋಟೇಶ್ವರ ಗುಡಿ ಲೈನ್.

ವಾರ್ಡ್ ನಂ. 6, 5 ತಟ್ಟೆಯವರ ಲೈನ್, ಶಿವನಾಗ ನಗರ 4 ಭಾಗಗಳು, ಪಣಿಭಂದ ಲೈನ್, ಗಣೇಶನಗರ ಭಾಗ–1, 2, 3, 4.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸರ್ಕಾರಿ ಹಾಸ್ಟೆಲ್‌ಗಳಿಗೆ ವಾರ್ಡನ್‌ಗಳ ನೇಮಿಸುವ ಕುರಿತು ವರದಿ ನೀಡಿ: ಸರ್ಕಾರಕ್ಕೆ ಹೈಕೋರ್ಟ್ ಸೂಚನೆ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಸರ್ಕಾರಿ ಹಾಸ್ಟೆಲ್‌ಗಳಿಗೆ ವಾರ್ಡನ್‌ಗಳ ನೇಮಿಸುವ ಕುರಿತು ವರದಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಕರ್ನಾಟಕ ಹೈಕೋರ್ಟ್ ಸೂಚನೆ ನೀಡಿದೆ. ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಹಾಸ್ಟೆಲ್‌ಗಳಲ್ಲಿ ವಾರ್ಡನ್ ಮತ್ತು ಮೇಲ್ವಿಚಾರಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯ ಬಗ್ಗೆ ಕರ್ನಾಟಕ ಹೈಕೋರ್ಟ್ ಮಂಗಳವಾರ ಕಳವಳ ವ್ಯಕ್ತಪಡಿಸಿದ್ದು, ಎಸ್‌ಸಿ–ಎಸ್ಟಿ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ನಿರ್ದಿಷ್ಟವಾಗಿ ಗಮನಹರಿಸಿ ಸಮಗ್ರ ವರದಿಯನ್ನು ಎರಡು ವಾರಗಳಲ್ಲಿ ನೀಡುವಂತೆ ಆದೇಶಿಸಿದೆ.

## ಸಹಾಯಧನ ಸೌಲಭ್ಯಕ್ಕೆ ಅರ್ಜಿ ಅಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಕೃಷಿ ಕ್ಷೇತ್ರದಲ್ಲಿ ನೂತನ ಪರಿಕಲ್ಪನೆಯೊಂದಿಗೆ ಆರಂಭಿಸುವ ಹೊಸ ಕೃಷಿ ನವೋದ್ಯಮಿಗಳಿಗೆ ಅನುಮೋದಿತ ಯೋಜನಾ ವರದಿಯ ಶೇ. 50ರಷ್ಟು ಸಹಾಯಧನ (ಕನಿಷ್ಠ ರೂ. 5 ಲಕ್ಷದಿಂದ ಗರಿಷ್ಠ ರೂ. 20 ಲಕ್ಷಗಳವರೆಗೆ) ಬ್ಯಾಂಕ್ ಸಾಲದ ಮುಖಾಂತರ (Backended Subsidy) ) ನೀಡಲಾಗುವುದು.

ಈಗಾಗಲೇ ಸ್ಥಾಪಿಸಲಾದ ನವೋದ್ಯಮಗಳ ವಿಸ್ತರಣೆಗಾಗಿ ಹಾಗೂ ಉನ್ನತೀಕರಣಕ್ಕಾಗಿ ಯೋಜನಾ ವರದಿಯ ಶೇ. 50 ರಷ್ಟು ಸಹಾಯಧನವನ್ನು (ಕನಿಷ್ಠ ರೂ. 20 ಲಕ್ಷದಿಂದ ಗರಿಷ್ಠ ರೂ. 50 ಲಕ್ಷಗಳವರೆಗೆ) ಕೃಷಿ ವಲಯದ ನವೋದ್ಯಮಿಗಳಿಗೆ ಬ್ಯಾಂಕ್ ಸಾಲದ ಮುಖಾಂತರ (Backended Subsidy) ನೀಡಲಾಗುವುದು.

ಪ್ರಸಕ್ತ 2023–24 ರ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಕೃಷಿ ಮಾರುಕಟ್ಟೆಗೆ ಸಂಬಂಧಿಸಿದ ವಲಯಗಳಲ್ಲಿ ನಾವೀನ್ಯತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೃಷಿ ಉದ್ಯಮಗಳಿಗೆ ಉತ್ತೇಜನ ನೀಡಲು "ನವೋದ್ಯಮ" ಎಂಬ ಹೊಸ ಯೋಜನೆಯನ್ನು ಸರ್ಕಾರದಿಂದ ಘೋಷಿಸಲಾಗಿದೆ.

ರೈತರು ನೂತನ ತಾಂತ್ರಿಕತೆಗಳನ್ನು ಅಳವಡಿಸುವ ಪರಿಕಲ್ಪನೆಗೆ ಹೊಂದುವಂತೆ ಹಾಗೂ ರೈತರ ಆದಾಯ ವೃದ್ಧಿಸುವಲ್ಲಿ ಸಹಕಾರಿಯಾಗುವಂತೆ ರಾಜ್ಯಾದ್ಯಂತ ಕೃಷಿ ವಲಯದಲ್ಲಿ ನೂತನ ಅವಿಷ್ಕಾರಗಳು, ನವೀನ ಉತ್ಪನ್ನಗಳು ಹಾಗೂ ಸೇವೆಗಳನ್ನು ಒಳಗೊಂಡಿರುವ ಕೃಷಿ ನವೋದ್ಯಮಗಳಿಗೆ ಉತ್ತೇಜನ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಹಾಗೂ ನಿಗದಿತ ಅರ್ಜಿ ನಮೂನೆಯನ್ನು ಆಯಾ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರಿಂದ ಪಡೆಯಬಹುದು ಎಂದು ಜಂಟಿ ಕೃಷಿ ನಿರ್ದೇಶಕಿ ಶ್ರೀಮತಿ ತಾರಾಮಣಿ ಜಿ.ಎಚ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕದ ಮುಚ್ಚಿದ ವಿಮಾ ಕಂಪನಿಗಳು । ಪಾಲಿಸಿ ಮಾಡಿಸಿದ ಏಜೆಂಟರೀಗ ಅಡಕತ್ತರಿಯಲ್ಲಿ

# ನಮಗೆ ನ್ಯಾಯ ಕೊಡಿಸಿ...

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಭೀಷ್ಮಕೆರೆಯ ಬಳಿ ನೂರಾರು ಜನ ಸೇರಿದ್ದರು. ಪುರುಷರು, ಮಹಿಳೆಯರು ಸೇರಿದಂತೆ ವಿಶೇಷ ಚೇತನರೂ ಅಲ್ಲಿದ್ದರು. ಎಲ್ಲರ ಬಾಯಲ್ಲೂ ಬರುತ್ತಿದ್ದಿದ್ದು 'ನಮಗೆ ನ್ಯಾಯ ಕೊಡಿಸಿ' ಎಂಬ ಮಾತೊಂದೇ. ಆಕರ್ಷಕ ಕಮಿಷನ್ ಆಸೆಗೆ ಬಿದ್ದು ನೂರಾರು ಜನರ ಬಳಿ ಕೋಟ್ಯಾಂತರ ರೂ ಮೌಲ್ಯದ ವಿಮಾ ಪಾಲಿಸಿ ಮಾಡಿಸಿದ ಏಜೆಂಟರು ಈಗ ದಿಕ್ಕು ಕಾಣದಂತಾಗಿದ್ದರು.

ಏಜೆಂಟರಾಗುವಂತೆ ನಾನಾ ವಿಧದ ಬಣ್ಣದ ಮಾತುಗಳನ್ನಾಡಿ ಆಕರ್ಷಿಸಿದ ವಿಮಾ ಕಂಪನಿಗಳ ಮಾತು ನಂಬಿದ ಆಸಕ್ತರು ಹಲವರ ಬಳಿ ವಿಮೆ ಮಾಡಿಸಿದ್ದಾರೆ. ಆದರೀಗ, ವಿಮೆ ತುಂಬಿಸಿಕೊಂಡ ಕಂಪನಿಗಳು ನಾಪತ್ತೆಯಾಗಿವೆ. ವಿಮೆ ಪಾಲಿಸಿ ಮಾಡಿಸಿ, ಕಂತು ತುಂಬಿದ ಸಾರ್ವಜನಿಕರು ತಮ್ಮ ಹಣ ವಾಪಸ್ ನೀಡುವಂತೆ ಏಜೆಂಟರ ದುಂಬಾಲು ಬಿದ್ದಿದ್ದಾರೆ. ಏಜೆಂಟರು ವಿಮಾ ಕಂಪನಿಯ ಪತ್ತೆಯಿಲ್ಲದೆ, ಪಾಲಿಸಿ ಮಾಡಿಸಿದವರಿಗೂ ಉತ್ತರ ಕೊಡಲಾರದೆ ಅತಂತ್ರ ಸ್ಥಿತಿಯಲ್ಲಿ ಅಲ್ಲಿ ಜಮಾಯಿಸಿ, ಸರ್ಕಾರ ನಮ್ಮ ಸಹಾಯಕ್ಕೆ ಬರಬೇಕೆಂದು ಬೇಡಿಕೊಳ್ಳುತ್ತಿದ್ದರು.



ಅಂದಹಾಗೆ, ಗದಗ ಜಿಲ್ಲೆಯ ನೂರಾರು ಏಜೆಂಟ್‌ಗಳು ಹಣದ ಆಸೆಗೆ ಮರುಳಾಗಿ ಮೊಸ ಹೋಗಿದ್ದಾರೆ. ಬಿಎಸ್‌ಎಲ್ ಸಹನಾ, ಗರಿಮಾ, ಅಗ್ರೀಗೊಲ್ಡ್, ಸಾಯಿ ಪ್ರಸಾದ್ ಗ್ರೂಪ್, ಸಮೃದ್ಧ ಜೀವನ, ಕಲ್ಪತರು, ಸಂಜೀವಿನಿ, ನವಜೀವನ, ಸೇರಿದಂತೆ 30ಕ್ಕೂ ಹೆಚ್ಚು ಕಂಪನಿಗಳು ಬಾಗಿಲು ಹಾಕಿ ನಾಪತ್ತೆಯಾಗಿವೆ. ಗದಗ ಜಿಲ್ಲೆಯ ನೂರಾರು ಏಜೆಂಟರು ಕಂಪನಿಯವರ ಮಾತಿಗೆ ಮರುಳಾಗಿ, ಕಮಿಷನ್ ಹಣದ ಆಸೆಗೆ ಬಿದ್ದು ಕೋಟ್ಯಾಂತರ ರೂ ಮೊತ್ತದ ಪಾಲಿಸಿ ಮಾಡಿಸಿದ್ದಾರೆ. ಇವರ ಬಳಿ ಹಲವು ವರ್ಷಗಳಿಂದ ಪಾಲಿಸಿ ಹಣ ತುಂಬಿದ ಫಲಾನುಭವಿಗಳು ಹಣ ನೀಡುವಂತೆ ಒತ್ತಡ ಹೇರುತ್ತಿದ್ದು, ನಿತ್ಯ ಮನೆಗೆ ಬಂದು, ಹಣ ನೀಡಿ ಇಲ್ಲವಾದರೆ ನಿಮ್ಮ ಜಮೀನು, ಮನೆ ಮಾರಾಟ ಮಾಡಿ ನಮಗೆ ಹಣ ನೀಡಿ ಎಂದು ಒತ್ತಡ ಹಾಕುತ್ತಿದ್ದಾರೆ, ನಮಗೆ ನ್ಯಾಯ ಕೊಡಿಸಿ ಎಂದು ಏಜೆಂಟರು ಕಣ್ಣೀರು ಹಾಕಿದರು.

ಗದಗ ಜಿಲ್ಲೆಯಲ್ಲಿಯೇ 100 ಕೋಟಿ ರೂ ಮೀರಿ ವಿಮೆ ಸಂದಾಯವಾಗಿದ್ದು, ಬಡ ಜನರು, ರೈತರು, ವ್ಯಾಪಾರಸ್ಥರು ಸೇರಿದಂತೆ ನಗರ ಹಾಗೂ ಗ್ರಾಮೀಣ ಭಾಗದ ಜನರು ಪಾಲಿಸಿ ಮಾಡಿಸಿದ್ದಾರೆ. ನಾಳೆಯ ದಿನ ಚೆನ್ನಾಗಿರಬೇಕೆಂಬ ಉದ್ದೇಶದಿಂದ ಅಲ್ಪಸ್ವಲ್ಪ ಆದಾಯದಲ್ಲೂ ಒಂದಿಷ್ಟು ಹಣ ಉಳಿಕೆ ಮಾಡಿ ವಿಮೆ ಮಾಡಿಸಿದವರಿದ್ದಾರೆ. ಅವರೂ ಸಹ ದಿಕ್ಕು ಕಾಣದಂತಾಗಿ, ನಮಗೆ ಹಣ ನೀಡಿ ಎಂದು ಏಜೆಂಟರ ಬೆನ್ನು ಬಿದ್ದಿದ್ದಾರೆ.

ಸರ್ಕಾರ 2019ರಲ್ಲಿ ಬಡ್ಸ್ ಆ್ಯಕ್ಟ್ ಜಾರಿಗೊಳಿಸಿದೆ. ಈ ಕಾನೂನಿನಡಿಯಲ್ಲಿ ವಿಮೆ ಕಂಪನಿಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿ, ಆ ಹಣವನ್ನು ಪಾಲಿಸಿದಾರರಿಗೆ ಹಿಂದಿರುಗಿಸಬೇಕೆಂದು ನಿಯಮ ಮಾಡಿದೆ. ಹೀಗಾಗಿ, ಗದಗ ಜಿಲ್ಲಾಧಿಕಾರಿಗಳು ಕೌಂಟರ್ ತೆರೆದು, ನೊಂದ ಫಲಾನುಭವಿಗಳ ಮಾಹಿತಿ ಪಡೆದುಕೊಂಡು ಹಣ ಮರಳಿಸಲು ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

### ಹೂವಿನಶಿಗ್ಲಿ ವಿರಕ್ತಮಠದ ಜಾತ್ರಾ ಮಹೋತ್ಸವದ ಅಂಗವಾಗಿ ಸಾಮೂಹಿಕ ವಿವಾಹ

# ಆದರ್ಶಮಯ ಜೀವನಕ್ಕೆ ಅಣಿಯಾಗಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಾಮೂಹಿಕ ವಿವಾಹ ಎಂದರೆ ಅದು ಕೇವಲ ಬಡ ಜನರ ಮದುವೆ ಕಾರ್ಯಕ್ರಮ ಎಂದು ಭಾವಿಸುವುದು ತಪ್ಪು. ಪವಿತ್ರವಾದ ಧಾರ್ಮಿಕ ಕ್ಷೇತ್ರ, ಸಹಸ್ರಾರು ಭಕ್ತರ ಮತ್ತು ಮಠಾಧೀಶರ ಆಶೀರ್ವಾದದೊಂದಿಗೆ ವಿವಾಹ ಬಂಧನಕ್ಕೊಳಗಾಗುವ ಭಾಗ್ಯ ಜೀವನದ ಸಾರ್ಥಕತೆಯ ಕ್ಷಣವಾಗಿದೆ ಎಂದು ಸವಣೂರ ದೊಡ್ಡಹುಣಸೇಮಠದ ಶ್ರೀ ಚನ್ನಬಸವ ಮಹಸ್ವಾಮಿಗಳು ಹೇಳಿದರು.

ಸಮೀಪದ ಹೂವಿನಶಿಗ್ಲಿ ವಿರಕ್ತಮಠದ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀಮಠದಲ್ಲಿ ನಡೆದ ಸಾಮೂಹಿಕ ವಿವಾಹ ಮಹೋತ್ಸವದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ವಿವಾಹ ಬಂಧನವೆಂದರೆ ಎರಡು ಮನಸ್ಸು, ಜೀವಗಳು ಒಂದಾಗಿ ಪರಸ್ಪರರು ಹಾಲು–ಜೇನಿನಂತೆ ಅನ್ಯೋನ್ಯತೆಯಿಂದ ಜೀವನ ಸಾಗಿಸುವ ಪವಿತ್ರ ಬಂಧವಾಗಿದೆ. ನವ ದಂಪತಿಗಳು ತಂದೆ–ತಾಯಿ, ಅತ್ತೆ–ಮಾವ, ಗುರು–ಹಿರಿಯರಲ್ಲಿ ವಿಧೇಯತೆ,



ತಾಳ್ಮೆಯಿಂದ ಆದರ್ಶಮಯ ಜೀವನಕ್ಕೆ ಅಣಿಯಾಗಬೇಕು. ಸಂಸಾರದ ಗುಟ್ಟು ಬಿಟ್ಟು ಕೊಡದೇ ಪ್ರೀತಿ, ವಿಶ್ವಾಸದಿಂದ ಸಂಸಾರದ ಜೋಡೆತ್ತಿನ ಬಂಡಿ ಸರಾಗವಾಗಿ ಸಾಗಿದಾಗ ಮಾತ್ರ ಆ ಮನೆ ಸ್ವರ್ಗವಾಗುತ್ತದೆ. ಸಂಪ್ರದಾಯ, ಸಂಸ್ಕೃತಿ, ಧರ್ಮಮಾರ್ಗ ಮತ್ತು ಮಠಮಾನ್ಯಗಳ ಸತ್ಸಂಗದೊಂದಿಗೆ ಸಾತ್ವಿಕ ಜೀವನಕ್ಕೆ ಒಗ್ಗಿಕೊಳ್ಳಬೇಕು ಎಂದರು.

ಹೂವಿನಶಿಗ್ಲಿ ವಿರಕ್ತಮಠದ ಶ್ರೀ ಚನ್ನವೀರ ಮಹಾಸ್ವಾಮಿಗಳು, ಲಿಂ. ನಿರಂಜನಾನಂದ ಮಹಾಸ್ವಾಮಿಗಳ ಆಶೀರ್ವಾದದಿಂದ ಲೋಕ ಕಲ್ಯಾಣ, ಧರ್ಮಾಚರಣೆ, ತ್ರಿವಿಧ ದಾಸೋಹ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅನಾಥ–ಬಡಮಕ್ಕಳ ಶಿಕ್ಷಣ, ವಸತಿ, ಪ್ರಸಾದ, ಆರೋಗ್ಯ, ಧಾರ್ಮಿಕ, ಸಮಾಜಮುಖಿ ಕಾರ್ಯ ಚಟುವಟಿಕೆಗಳ ಮೂಲಕ ನಾಡಿನ ಅಪಾರ ಭಕ್ತ ಗಣದ ಮನ ಗೆದ್ದಿದೆ. ಇಂತಹ ಸೇವಾ ಮಠಗಳಿಗೆ ಭಕ್ತರ ಸಹಾಯ–ಸಹಕಾರ ಅಗತ್ಯ ಎಂದು ಶ್ರೀಗಳು ನುಡಿದರು.

ಹೂವಿನಶಿಗ್ಲಿ ವಿರಕ್ತಮಠದ ಚೆನ್ನವೀರ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು. ಗುಡ್ಡದಆನ್ವೇರಿ ಮಠದ ಶಿವಯೋಗಿಶ್ವರ ಮಹಾಸ್ವಾಮಿಗಳು ನೇತೃತ್ವ ವಹಿಸಿದ್ದರು. ವೇದಿಕೆಯಲ್ಲಿ ಲಕ್ಷ್ಮೇಶ್ವರದ ಸೋಮೇಶ್ವರ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ, ಪ್ರಗತಿಪರ ರೈತ ಬಸಣ್ಣ ಬೆಂಡಿಗೇರಿ, ಶಿವಾನಂದ ಕಟ್ಟಿಮನಿ ಉಪಸ್ಥಿತರಿದ್ದರು. ಗುರುಕುಲ ಶಿಕ್ಷಣ ಸಂಸ್ಥೆಗೆ ವಿಶೇಷ ದಾನವನ್ನು ನೀಡಿದ ಪಟ್ಟಣದ ಪಾಂಡುರಂಗ ಶೇಟ್ ಅವರ ಪುತ್ರ ರಾಘವೇಂದ್ರ ಶೇಟ್ ಹಾಗೂ ಸೋನಾಳದ ಡಾ. ಪರಮೇಶ್ವರ ಬಿರಾದಾರ ಮತ್ತಿತರರಿಗೆ ಶ್ರೀಮಠದ ಗುರುರಕ್ಷೆ ನೀಡಲಾಯಿತು.

ಬೂದಿಹಾಳದ ಗವಿಸಿದ್ದ ಶಾಸ್ತ್ರಿಗಳು ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕರಾದ ಮಹಾದೇವ ಬಿಷ್ಟಣ್ಣವರ, ಕೆ.ಎಸ್. ಇಟಗಿಮಠ, ರೇಣುಕಗೌಡ ಪಾಟೀಲ ನಿರ್ವಹಿಸಿದರು. ನಂತರ ಶ್ರೀಗಳ ತುಲಾಭಾರ, ಗುರುಕುಲ ಮಕ್ಕಳಿಂದ ಮಲ್ಲಕಂಬ ಪ್ರದರ್ಶನ, ಕಡುಬಿನ ಕಾಳಗ ಹಾಗೂ ಮಹಾತ್ಮರ ಬದುಕು–ಬೆಳಕು ಕುರಿತು ಚಿಂತನಗೋಷ್ಠಿ ನೆರವೇರಿತು.

### ರೋಣ ಪೊಲೀಸರ ಕಾರ್ಯಾಚರಣೆಗೆ ಎಸ್‌ಪಿ ಬಿ.ಎಸ್. ನೇಮಗೌಡ ಶ್ಲಾಘನೆ

# ಆರೋಪಿ ಸಮೇತ ಹತ್ತು ಬೈಕ್ ವಶಕ್ಕೆ



■ ವಿಜಯಸಾಕ್ಷಿ ಸುದ್ದಿ, ರೋಣ

ನಗರ ಸೇರಿದಂತೆ ತಾಲೂಕಿನ ವಿವಿಧೆಡೆ ದ್ವಿಚಕ್ರ ವಾಹನ ಕಳ್ಳತನ ನಡೆಯುತ್ತಿರುವ ಬಗ್ಗೆ ಆಗಾಗ ವಿಷಯಗಳು ಕೇಳಿ ಬರುತ್ತಿದ್ದವು. ಇದನ್ನು ಭೇದಿಸಿರುವ ರೋಣ ಪೊಲೀಸರು ಅರೋಪಿ ಸಮೇತ ಹತ್ತು ಬೈಕ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ರೋಣ ಪಟ್ಟಣ ಸೇರಿದಂತೆ ಅನೇಕ ಕಡೆಗಳಲ್ಲಿ ದ್ವಿಚಕ್ರ ವಾಹನಗಳ ಕಳ್ಳತನ ನಡೆಯುತ್ತಿರುವ ಬಗ್ಗೆ ಅನೇಕ ದೂರುಗಳು ಬಂದಿದ್ದವು. ಈ ಕುರಿತು ಸಿಪಿಐ ಎಸ್.ಎಸ್. ಬಿಳಗಿ, ಪಿಎಸ್‌ಐ ಎಲ್.ಕೆ. ಜೂಲಕಟ್ಟಿಯವರ ನೇತೃತ್ವದಲ್ಲಿ ತಂಡವನ್ನು ರಚಿಸಿ ತನಿಖೆಗೆ ಆದೇಶಿಸಲಾಗಿತ್ತು. ತನಿಖೆ ನಡೆಸಿದ ರೋಣ ಪೊಲೀಸರು ಆರೋಪಿ ಸಮೇತ 10 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದು ಶ್ಲಾಘನೀಯವಾಗಿದೆ.

ಅಪರಾಧ ಪ್ರಕರಣಗಳನ್ನು ತಪ್ಪಿಸುವ ನಿಟ್ಟಿನಲ್ಲಿ ರೋಣ ಪಟ್ಟಣದ ಮುಖ್ಯ ಸ್ಥಳಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲು ಚಿಂತನೆ ಕೈಗೊಂಡಿದ್ದು, ಶೀಘ್ರವೇ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು.

**– ಬಿ.ಎಸ್. ನೇಮಗೌಡ.**
ಗದಗ ಎಸ್.ಪಿ.

ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಎಲ್ಲರಿಗೂ ಪ್ರಶಂಸಾ ಪತ್ರದೊಂದಿಗೆ ಸೂಕ್ತ ಬಹುಮಾನವನ್ನು ವಿತರಿಸಲಾಗುವುದು ಎಂದರು.

ಡಿವಾಯ್‌ಎಸ್‌ಪಿ ಪ್ರಭುಗೌಡ ಡಿ.ಕೆ. ಮಾತನಾಡಿ, ಹಲವಾರು ದಿನಗಳಿಂದ ನಡೆಯುತ್ತಿರುವ ಕಳ್ಳತನಕ್ಕೆ ರೋಣ ಪೊಲೀಸರ ಕಾರ್ಯಾಚರಣೆ ಚುರುಕು ಮುಟ್ಟಿಸಿದ್ದು, ಶಹರ ನಿವಾಸಿಯಾದ ಸಿರಾಜ್ ಬಾವಾಸಾಬ ದಳವಾಯಿಯನ್ನು ಬಂಧಿಸಲಾಗಿದೆ ಎಂದರು.

ಸಿಪಿಐ ಎಸ್.ಎಸ್. ಬಿಳಗಿ, ಪಿಎಸ್‌ಐ ಎಲ್.ಕೆ. ಜೂಲಕಟ್ಟಿ, ಎಸ್.ಬಿ. ಪವಾಡಿ, ಎಚ್.ಎಸ್. ಶಂಕ್ರಿ, ಕುಮಾರ ತಿಗರಿ, ವ್ಹಿ.ಎಸ್. ರಾಯರ, ಮಂಜುನಾಥ ಬಂಡಿವಡ್ಡರ, ಮಂಜುನಾಥ ಕುರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಒಂದೇ ಸಂಖ್ಯೆಯ ನಂಬರ್ ಪ್ಲೇಟನ್ನು ನಾಲ್ಕು ಬೈಕ್‌ಗಳಿಗೆ ಅಳವಡಿಸಿ ಮಾರಾಟ ಮಾಡಿದ್ದು ಈ ಪ್ರಕರಣದಿಂದ ಬಯಲಿಗೆ ಬಂದಿರುವುದು ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ. ಸರಿಯಾದ ದಾಖಲಾತಿಗಳಿಲ್ಲದೆ ಬೈಕ್ ಖರೀದಿ ಮಾಡಿದ ಗ್ರಾಹಕರ ವಿರುದ್ಧವೂ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

## ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ



■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿಯನ್ನು ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಸೋಮವಾರದಂದು ಸರಳವಾಗಿ ಆಚರಿಸಲಾಯಿತು. ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಶಿವಯೋಗಿ ಸಿದ್ಧರಾಮೇಶ್ವರ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಗೌರವ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ರವಿ ಗುಂಜಿಕರ್ , ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ ಸೇರಿದಂತೆ ಸಮಾಜದ ಮುಖಂಡರು ಹಾಜರಿದ್ದರು.



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಲಕ್ಷ್ಮೇಶ್ವರದಿಂದ ಹುಬ್ಬಳ್ಳಿಗೆ ತಡೆರಹಿತ ಬಸ್ ಸೌಲಭ್ಯಕ್ಕೆ ಶಾಸಕ ಡಾ. ಚಂದ್ರು ಲಮಾಣಿ ಮಂಗಳವಾರ ಚಾಲನೆ ನೀಡಿದರು. ಈ ವೇಳೆ ಸಾರಿಗೆ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು, ಪುರಸಭೆ ಸದಸ್ಯರು, ಮುಖಂಡರು, ಸಾರ್ವಜನಿಕರು ಹಾಜರಿದ್ದರು.

## ಸಾಕ್ಷಿ ಸುಭಾಷಿತ

**ದುಡಿಮೆ ಮಾಡದೆ ಬಾಳುವುದು ನಾಗರಿಕತೆ ಲಕ್ಷಣ ಎಂಬ ತಪ್ಪು ಗ್ರಹಿಕೆ ಜಗತ್ತನ್ನು ಬಿಟ್ಟು ತೊಲಗುವವರೆಗೂ ದುಡಿಮೆಯ ಬೆಲೆ ಅರ್ಥವಾಗುವುದಿಲ್ಲ.**

**–ವಿ. ಕಾಪಟ್**

## ಸಂಪಾದಕೀಯ

# ಒಂದು ಕೈಯಿಂದ ಕೊಟ್ಟು...

ರಾಜ್ಯ ಸರ್ಕಾರದ 5ನೇ ಗ್ಯಾರಂಟಿಯಾದ ಯುವ ನಿಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದ್ದಾರೆ. ಅರ್ಜಿ ಸ್ವೀಕರಿಸುವ ಪ್ರಕ್ರಿಯೆ ಆರಂಭವಾದಾಗಿನಿಂದ ಇವರಿಗೆ 85,000 ಜನ ಅರ್ಜಿ ಸಲ್ಲಿಸಿದ್ದಾರೆ. ಆದರೆ ಕೇವಲ ರೂ.3,000 ಅರ್ಜಿಗಳು ಮಾತ್ರ ಮಾನದಂಡಗಳಿಗೆ ಅನುಗುಣವಾಗಿವೆ ಎನ್ನುವ ಮಾಹಿತಿ ಇದೆ.

ಯುವ ನಿಧಿ ಲಾಭ ಪಡೆಯಲು ಅರ್ಜಿ ಸಲ್ಲಿಕೆಗೆ ಈಗಲೂ ಅವಕಾಶವಿದೆ. ಲಕ್ಷಾಂತರ ವಿದ್ಯಾರ್ಥಿಗಳು ಇನ್ನೂ ಅರ್ಜಿ ಸಲ್ಲಿಸುವ ಹಂತದಲ್ಲಿದ್ದಾರೆ. ಯುವ ನಿಧಿ ಕಾರ್ಯಕ್ರಮ ಒಳ್ಳೆಯದಾಗಿದ್ದರೂ ಅದರ ಕೆಲವು ಮಾನದಂಡಗಳ ಬಗ್ಗೆ ಯುವಕರಲ್ಲಿ ಅಸಮಾಧಾನವಿದೆ.

ಅದೆಲ್ಲಕ್ಕಿಂತ ಹೆಚ್ಚಾಗಿ ಸರಕಾರದ ನಡೆಗೆ ವಿದ್ಯಾರ್ಥಿಗಳಿಂದ ವ್ಯಾಪಕ ಖಂಡನೆ ವ್ಯಕ್ತವಾಗಿದೆ. ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ರಾಜ್ಯಾದ್ಯಂತ ಶೇ. 10ರಷ್ಟು ಶುಲ್ಕ ಏರಿಕೆಯಾಗಿದೆ. ಶುಲ್ಕದಲ್ಲಿ ಏಕರೂಪತೆ ಕಾಯ್ದುಕೊಳ್ಳುವ ಉದ್ದೇಶ ಎನ್ನುತ್ತಲೆ ನಿಧಾನವಾಗಿ ಉನ್ನತ ಶಿಕ್ಷಣದ ಶುಲ್ಕ ಹೆಚ್ಚಾಗಿದೆ. ಖಾಸಗಿ ಸಂಸ್ಥೆಗಳಲ್ಲಿ ಶುಲ್ಕ ದುಪ್ಪಟ್ಟಾಗಿದೆ.

ಸರಕಾರ ಒಂದು ಕಡೆ ಶುಲ್ಕ ಏರಿಕೆ ಮಾಡಿ, ಮತ್ತೊಂದು ಕಡೆ ಅದೇ ಹಣವನ್ನು ಯುವ ನಿಧಿ ಮೂಲಕ ಉನ್ನತ ಶಿಕ್ಷಣದಿಂದ ವಿಮುಖರಾದ ವಿದ್ಯಾರ್ಥಿಗಳಿಗೆ ನೀಡಲು ಮುಂದಾಗಿದೆ. ಕಾಂಗ್ರೆಸ್ ನಿಜವಾಗಿಯೂ ಬಡವರ ಪರವಾಗಿದ್ದರೆ ಉನ್ನತ ಶಿಕ್ಷಣದ ಶುಲ್ಕವನ್ನು ಕಡಿಮೆ ಮಾಡಬಹುದಿತ್ತು. ಆದರೆ ಸರಕಾರ ಒಂದು ಕಡೆ ಉನ್ನತ ಶಿಕ್ಷಣಕ್ಕೆ ಹೋಗುವವರಿಗೆ ಬರೆ ಹಾಕಿ, ಉನ್ನತ ಶಿಕ್ಷಣದಿಂದ ವಿಮುಖರಾದವರಿಗೆ ಯುವನಿಧಿ ಕೊಡುವ ಕೆಲಸಕ್ಕೆ ಮುಂದಾಗಿರುವುದು ವಿದ್ಯಾರ್ಥಿಗಳ ಅಸಮಾಧಾನಕ್ಕೆ ಕಾರಣವಾಗಿದೆ.

ಸರಕಾರ ಒಂದು ಕೈಯಿಂದ ಕೊಟ್ಟು ಮತ್ತೊಂದು ಕೈಯಿಂದ ಕಸಿದುಕೊಳ್ಳುವುದು ಅಂದರೆ ಇದೇ ಅಲ್ಲವೇ ಎಂದು ವಿದ್ಯಾರ್ಥಿಗಳು ಪ್ರಶ್ನಿಸುವಂತಾಗಿದೆ. ಯುವಕರ ಬಗ್ಗೆ ಕಾಂಗ್ರೆಸ್ ಪಕ್ಷಕ್ಕೆ ಕಾಳಜಿ ಇದ್ದಿದ್ದರೆ ಸರಕಾರ ಉನ್ನತ ಶಿಕ್ಷಣದ ಶುಲ್ಕವನ್ನು ಹೆಚ್ಚಿಸುವ ಕೆಲಸಕ್ಕೆ ಕೈ ಹಾಕಬಾರದಿತ್ತು. ಶುಲ್ಕ ಹೆಚ್ಚಳಕ್ಕೆ ಅವಕಾಶವೂ ನೀಡಬಾರದಿತ್ತು.

ನಾಲ್ಕು ಗ್ಯಾರಂಟಿ ಯೋಜನೆಗಳ ಭಾರದಿಂದ ತತ್ತರಿಸಿರುವ ಕಾಂಗ್ರೆಸ್ ಸರಕಾರ, ಅಂತಿಮವಾಗಿ ಒಂದು ಕೈಯಿಂದೆ ಕೊಟ್ಟು ಮತ್ತೊಂದು ಕೈಯಿಂದ ಕಿತ್ತುಕೊಳ್ಳುವ ಕೆಲಸ ಆರಂಭಿಸಿರುವುದು ಸರಿಯಲ್ಲ.

## ಪೂರ್ವದಿಂದ ಪಶ್ಚಿಮದೆಡೆಗೆ 6 ಸಾವಿರ ಕಿಲೋ ಮೀಟರ್ ನ್ಯಾಯಕ್ಕಾಗಿ ನಡಿಗೆ

# ಆ ರಾಮನಿಂದ ಈ ರಾಮನವರೆಗೆ...

ಆ ರಾಮ ಅಂದು ಸೀತೆಯ ಅಪಹರಣದ ನಂತರ, ತನ್ನ ಪ್ರೀತಿ ಪಾತ್ರ ಹೆಂಡತಿಯನ್ನು ಅರಸಿ ಕಾಲ್ನಡಿಗೆಯಲ್ಲಿ ಪಂಚವಟಿಯಿಂದ ಶ್ರೀಲಂಕಾದವರೆಗೂ ಪಯಣಿಸಿದ ಕಥೆ ನಮಗೆ ಗೊತ್ತು. ಈ ಚರಿತ್ರೆಯನ್ನು ನಾವು ಬಾಲ್ಯದಿಂದಲೂ ಕೇಳಿದ್ದೇವೆ. ಚಲನಚಿತ್ರಗಳಲ್ಲಿ, ಪುಸ್ತಕಗಳಲ್ಲಿ ನೋಡಿ ತಿಳಿದುಕೊಂಡಿದ್ದೇವೆ. ಹೆಂಡತಿಯನ್ನು ಅಪಹರಿಸಿದ ರಾವಣನನ್ನು ವಿರೋಧಿಸಿ, ರಾಮ ಮುಕ್ಕಾಲು ಭಾರತ ನಡೆದೇ ಹೋದ. ಅದೊಂದು ಅಮರ ಪ್ರೇಮದ ಕಥೆ. ಇದು ರಾಮ–ರಾವಣರ ಯುದ್ಧದಲ್ಲಿ ಕೊನೆಗೊಂಡಿದ್ದನ್ನು ನಾವು ಕೇಳಿದ್ದವೆ.




ಆದರೆ, ಈ ರಾಮ ದೇಶದ ತುಂಬ ಹರಡಿರುವ ದ್ವೇಷ, ಅಸಮಾನತೆ, ಸುಳ್ಳಿನ ಸಾಮ್ರಾಜ್ಯದ ವಿರುದ್ಧ, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆದೇ ಹೊರಟ. ಈ ಹಂತದಲ್ಲಿ ಬಡವರು, ದೀನ–ದಲಿತರು, ಶೋಷಿತರು, ಕಾರ್ಮಿಕರು, ಮಕ್ಕಳು, ವೃದ್ಧರು, ಯಾರನ್ನು ಬಿಡದೆ, ಸಂತೈಸುತ್ತ, ಆತ್ಮೀಯವಾಗಿ ಆಲಂಗಿಸುತ್ತಾ, ಅವರ ಜೊತೆ ಬೆರೆಯುತ್ತಾ, 3570 ಕಿ.ಮೀ ನಡೆದ. ಹಗಲು, ರಾತ್ರಿ, ಮಳೆ, ಚಳಿ, ಗಾಳಿ, ಕಲ್ಲು, ಮುಳ್ಳು ಯಾವುದೂ ಆತನಿಗೆ ಅಡ್ಡಿಪಡಿಸಲಿಲ್ಲ. ಜನಮಾನಸದ ಪ್ರೀತಿಯ ಎದಿರು ಯಾವುದನ್ನು ಲೆಕ್ಕಿಸಲಿಲ್ಲ ಮತ್ತು ಎದೆಗುಂದಲಿಲ್ಲ.

ಭಾರತದ ಚರಿತ್ರೆಯಲ್ಲಿ ಮಾಜಿ ಪ್ರಧಾನಿ ಚಂದ್ರಶೇಖರ ನಂತರ, ಅವರ ಹಾದಿಯನ್ನು ಮೀರಿ ನಡೆದು, ಭಾರತ್ ಜೋಡೋ ಎಂಬ ಸಂಚಲನ ಮೂಡಿಸಿದ. ಗದ್ದೆಗೆ ನುಗ್ಗಿದ, ಕೆಳವರ್ಗದ ಕಾರ್ಮಿಕರ ಜೊತೆ ಬೆರೆತು, ಜನರಲ್ಲಿ ಪ್ರೀತಿಯ ಸಂಚಲನ ಮೂಡಿಸಿದ. ಭಾರತದ ವಿವಿಧ ಜನಾಂಗದ, ವಿವಿಧ ಸಂಸ್ಕೃತಿಯ ಜನರನ್ನು ಭೇಟಿಯಾದ. ಆತ ನಡೆದ ಸುದೀರ್ಘ ಪಯಣ ಆತನ ಇಮೇಜನ್ನೇ ಬದಲಿಸಿತು. ಭಾರತದ ಜನರಲ್ಲಿ ಹೊಸ ಆಶಾಕಿರಣ ಮೂಡಿಸಿತು. ಪಪ್ಪು ಎಂದು ಕರೆದವರ ಎದೆಯ ಮೇಲೆ ಮೂಡಿಸಿದ ಆತನ ಸದೃಡ ಹೆಜ್ಜೆ, ಹೊಸ ನಾಯಕನ ಭರವಸೆ ನೀಡಿದೆ. ಇದು ದಕ್ಷಿಣದಿಂದ ಉತ್ತರದ ಯಶಸ್ವಿ ನಡೆ.

ಮಧ್ಯದಲ್ಲಿ ಚುನಾವಣೆ ಬಂತು. ಪಕ್ಷಕ್ಕೆ ಹಿನ್ನಡೆಯಾಯಿತು. ಆದರೂ ಆತನ ಕಂಗೆಡಲಿಲ್ಲ. ಆದರ ಹಿಂದಿನ ಮಸಲತ್ತುಗಳನ್ನು ಮೀರಿ ನಿಲ್ಲಲ್ಲು ಪೂರ್ವದಿಂದ ಪಶ್ಚಿಮದೆಡೆಗೆ 6 ಸಾವಿರ ಕಿಲೋ ಮೀಟರ್ ನ್ಯಾಯಕ್ಕಾಗಿ ನಡಿಗೆ ಹೊರಟಿದ್ದಾನೆ. ಬಹುಶಃ ಭಾರತದಲ್ಲಿ ಆದಿಶಂಕರರ ನಂತರ, ಇಂತಹದೊಂದು ನಡಿಗೆ ಸಾಧ್ಯವಾಗಿದ್ದು, ರಾಹುಲ್‌ನ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ.

2024ರ ಜನವರಿ 22ಕ್ಕೆ ರಾಮಮಂದಿರ ಉದ್ಘಾಟನೆಯಾಗುವ ಈ ಸಂದರ್ಭದಲ್ಲಿ ಅಂದಿನ ರಾಮನನ್ನು ಭಾರತ ಕೇಳಿತ್ತು, ನೋಡಿರಲಿಲ್ಲ. ಈಗ ನೋಡುವ ಅವಕಾಶ ಪೂರ್ವ ಭಾರತದಿಂದ ಪಶ್ಚಿಮ ಭಾರತದವರೆಗೆ ಜನರಿಗೆ ಲಭ್ಯವಿದ್ದಾನೆ. ನೀವು ಕಣ್ಣಾರೆ ಕಾಣುವ ಈ ರಾಮ. ನಿಮ್ಮಲ್ಲಿ ಪ್ರೀತಿ ಅರಸುತ್ತಾ ಹೊರಟಿದ್ದಾನೆ. ನಿಮ್ಮಲ್ಲಿಗೆ ಬಂದಾಗ ನೋಡಿ, ಆನಂದಿಸಿ, ಹರಸಿ, ಹಾರೈಸಿ.



ಜೈ ಶ್ರೀರಾಮ..

ಜೈ ರಾಹುಲ್...

**–ರಮೇಶ ಸುರ್ವೆ.**
ಹಿರಿಯ ಪತ್ರಕರ್ತರು.

# ರಾಮಮಂದಿರ ವಿಚಾರವನ್ನು ಬಿಜೆಪಿ ರಾಜಕೀಯವಾಗಿ ಬಳಸಿಕೊಂಡಿಲ್ಲ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ನಿರ್ಮಾಣ ವಾದ ಭವ್ಯ ರಾಮಮಂದಿರ ಎಲ್ಲ ಧರ್ಮ, ಜಾತಿ, ಪಕ್ಷದವರೂ ಪೂಜಿಸಿ, ಗೌರವಿಸುವ ರಾಷ್ಟ್ರಮಂದಿರವೇ ಆಗಿದೆ. ಕಾಂಗ್ರೆಸ್‌ನವರು ಹೇಳುವಂತೆ ಬಿಜೆಪಿ ಎಂದಿಗೂ ರಾಜಕೀಯವಾಗಿ ಬಳಸಿಕೊಳ್ಳುವುದಿಲ್ಲ ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ಅವರು ಭಾನುವಾರ ಲಕ್ಷ್ಮೇಶ್ವರದ ಮಾಜಿ ಶಾಸಕ ಜಿ.ಎಂ. ಮಹಾಂತಶೆಟ್ಟರ ಅವರ ನಿವಾಸದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ರಾಮಮಂದಿರ ಎಲ್ಲರೂ ಒಗ್ಗೂಡಿಸುವ, ಶಾಂತಿ, ಸೌಹಾರ್ದತೆ ಬೆಸೆಯುವ ಶ್ರದ್ಧಾ ಕೇಂದ್ರವಾಗಿದೆ. ಕಾಮಾಲೆ ಕಣ್ಣಿಗೆ ಲೋಕವೆಲ್ಲ ಹಳದಿ ಎನ್ನುವಂತೆ ಕಾಂಗ್ರೆಸ್‌ನವರು ಬಿಜೆಪಿ ರಾಮ ಮಂದಿರವನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿದೆ ಎನ್ನುತ್ತಿರುವುದು ಸರಿಯಲ್ಲ ಎಂದರು.



500 ವರ್ಷಗಳ ಹಿಂದೆ ರಾಮ ಮಂದಿರವನ್ನು ಒಡೆದು ಅಲ್ಲಿ ಬಾಬರೀ ಮಸೀದಿ ಕಟ್ಟಿದ್ದು ಪ್ರತಿಯೊಬ್ಬ ರಾಷ್ಟ್ರಭಕ್ತನಿಗೆ ಗುಲಾಮಗಿರಿಯ ಸಂಕೇತವಾಗಿ ಕಾಣುತ್ತಿತ್ತು. ಆ ಗುಲಾಮಗಿರಿಯ ಸಂಕೇತ ಇದೀಗ ಭಸ್ಮವಾಗಿ ಭವ್ಯ ರಾಮಮಂದಿರ ನಿರ್ಮಾಣವಾಗಿದೆ. ಈ ಕನಸು ನನಸಾಗಿಸಲು ಸಾವಿರಾರು ಸಂತರು, ರಾಮಭಕ್ತರು ತಮ್ಮನ್ನೇ ಸಮರ್ಪಿಸಿಕೊಂಡಿದ್ದಾರೆ ಎಂದರಲ್ಲದೆ, ಸಂಸದ ಅನಂತಕುಮಾರ ಹೆಗಡೆಯವರ ಹೇಳಿಕೆಯನ್ನು ಸಮರ್ಥಿಸಿ, ಸಿದ್ಧರಾಮಯ್ಯನವರ ಬಗ್ಗೆ ಏಕವಚನದಲ್ಲಿ ಮಾತನಾಡಿದ್ದು ತಪ್ಪು. ಆದರೆ ನರೇಂದ್ರ ಮೋದಿಯವರ ಬಗ್ಗೆ ಸಿದ್ಧರಾಮಯ್ಯನವರು ಹಲವು ಬಾರಿ ಏಕವಚನದಲ್ಲಿ ಮಾತನಾಡಿದ್ದಾರೆ ಎಂದರು.

ಈ ವೇಳೆ ಶಾಸಕ ಡಾ. ಚಂದ್ರು ಲಮಾಣಿ, ಮಾಜಿ ಶಾಸಕ ಜಿ.ಎಂ. ಮಹಾಂತಶೆಟ್ಟರ, ನಾಗರಾಜ ಕುಲಕರ್ಣಿ, ಗುರುನಾಥ ದಾನಪ್ಪನವರ, ಚಂಬಣ್ಣ ಬಾಳಿಕಾಯಿ, ಬಿಜೆಪಿ ಮಂಡಳ ಅಧ್ಯಕ್ಷ ಫಕ್ಕೀರೇಶ ರಟ್ಟಿಹಳ್ಳಿ, ನಾಗರಾಜ ಕುಲಕರ್ಣಿ, ಶಿವಯೋಗಿ ಅಂಕಲಕೋಟಿ, ಪ್ರವೀಣ ಬಾಳಿಕಾಯಿ, ಕಾಂತೇಶ ಈಶ್ವರಪ್ಪ, ಸಿದ್ದು ದುರಗಣ್ಣವರ, ಹಾಲಪ್ಪ ಸೂರಣಗಿ, ಈರಣ್ಣ ಅಕ್ಕೂರ ಸೇರಿದಂತೆ ಅನೇಕರಿದ್ದರು.

## ಅನೈತಿಕ ಪೊಲೀಸ್‌ಗಿರಿಯನ್ನು ಮಟ್ಟ ಹಾಕಿ

**■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಹಾವೇರಿ ಜಿಲ್ಲೆಯ ಹಾನಗಲ್‌ನಲ್ಲಿ ನಡೆದ ನೈತಿಕ ಪೊಲೀಸ್‌ಗಿರಿ, ಸಾಮೂಹಿಕ ಅತ್ಯಾಚಾರ ಪ್ರಕರಣ ಖಂಡನೀಯ. ಮನದಲ್ಲಿ ಕೋಮು ವಿಷ ತುಂಬಿಕೊಂಡು ಸಂವಿಧಾನ ತತ್ವಕ್ಕೆ ಅಪಚಾರಗೈದು ಕಾನೂನನ್ನು ಕೈಗೆತ್ತಿಕೊಳ್ಳುವ ಇಂತಹ ಪ್ರಕ್ರಿಯೆಯನ್ನು ಸರಕಾರ ಮಟ್ಟ ಹಾಕಲೇಬೇಕು ಎಂದು ವೆಲ್ ಫೇರ್ ಪಾರ್ಟಿ ಆಫ್ ಇಂಡಿಯಾದ ಕರ್ನಾಟಕ ರಾಜ್ಯಾಧ್ಯಕ್ಷ, ನ್ಯಾಯವಾದಿ ತಾಹೇರ್ ಹುಸೇನ್ ಹೇಳಿದ್ದಾರೆ.

ಅವರು ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಘಟನೆಯಲ್ಲಿ ಸಂತ್ರಸ್ತೆಯ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಈ ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿ ಯಾವುದೇ ರಾಜಕೀಯ ಮಾಡದೆ, ಪ್ರಾಮಾಣಿಕವಾಗಿ ತನಿಖೆ ನಡೆಸಿ ಸಂತ್ರಸ್ತೆಗೆ ನ್ಯಾಯ ದೊರಕಿಸಿ ಕೊಡಬೇಕಾದುದು ಸರಕಾರದ ಕರ್ತವ್ಯ. ಪ್ರಕರಣ ಮುಚ್ಚಿ ಹಾಕಲು ಸರಕಾರ ಪ್ರಯತ್ನಿಸುತ್ತಿದೆ ಎಂಬ ವಿರೋಧ ಪಕ್ಷಗಳ ಆರೋಪವೂ ಗಮನಾರ್ಹ ಎಂದಿದ್ದಾರೆ.

# ಡಂಬಳದಲ್ಲಿ ಪುಣ್ಯಾರಾಧನೆ, ಮೆರವಣಿಗೆ

**■ ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಇಲ್ಲಿನ ಡಂಬಳ ಗ್ರಾಮದಲ್ಲಿ ಪ್ರತಿವರ್ಷ ಸಂಕ್ರಾತಿಯ ದಿನದಂದು ಜರುಗುವ ಶ್ರೀಹಾಲೇಶ್ವರ ಮಠದ ಲಿಂಗೈಕ್ಯ ಶಿವಯ್ಯಜ್ಜ ಹಾಗೂ ಶಂಕರಯ್ಯಜ್ಜ ಹಾಲಸ್ವಾಮಿಗಳ ಪುಣ್ಯಾರಾಧನೆಯ ನಿಮಿತ್ತ ಭಾವಚಿತ್ರದ ಮೆರವಣಿಗೆ ಜರುಗಿತು.

ಮೆರವಣಿಗೆಯಲ್ಲಿ ನರಗುಂದದ ಪಂಚಲಿಂಗೇಶ್ವರ ರಗ್ಗಲಿಗೆ ಮೇಳ ಹಾಗೂ ಮಾಯಮ್ಮ ದೇವಿ ಡೊಳ್ಳಿನ ಮೇಳಗಳು ಜನಾಕರ್ಷಣೆ ಪಡೆದುಕೊಂಡಿತು. ಪವಾಡ ಪುರಷರಾಗಿದ್ದ ಶ್ರೀ ಹಾಲಶಿವಶಂಕರರ ಪವಾಡಗಳ ಕುರಿತು ಗ್ರಾಮದಲ್ಲಿ ಚರ್ಚೆಗಳು ನಡೆದವು.



ಕಾರ್ಯಕ್ರಮದಲ್ಲಿ ಹಾಲೇಶ್ವರ ಮಠದ ಸೇವಾ ಸಮಿತಿಯ ಅಧ್ಯಕ್ಷ ನಿಂಗಪ್ಪ ಪಲ್ಲೇದ, ಉಪಾಧ್ಯಕ್ಷ ಚನ್ನಬಸಪ್ಪ ಕೊರ್ಲಹಳ್ಳಿ, ಕಾರ್ಯದರ್ಶಿ ಶಂಭುಲಿಂಗ ಗಡಗಿ, ಖಜಾಂಜಿ ಮಲ್ಲಿಕಾರ್ಜುನ ಹೊಸಮನಿ, ಗುತ್ತಿಗೆದಾರ ವಿ.ಟಿ. ಮೇಟಿ, ಗೋಣಿಬಸಪ್ಪ ಕೊರ್ಲಹಳ್ಳಿ, ಪ್ರವಚನಕಾರರಾದ ಬಸುರಾಜ ಪೂಜಾರ, ಮರಿಯಪ್ಪ ಸಿದ್ದಣ್ಣವರ, ದೇವಪ್ಪ ತಳಗೇರಿ, ಶಿದ್ದಲಿಂಗೇಶ ಹಿರೇಮಠ, ಸಿದ್ಧಪ್ಪ ಹಡಪದ, ರಾಜಪ್ಪ ಕರ್ಣಿ, ಮೈಲಾರಪ್ಪ ಕೊರ್ಲಹಳ್ಳಿ, ಹಾಲೇಶ ತುಂಬರಗುದ್ದಿ, ಕಾಜಾಸಾಬ ಆಲೂರ, ಬೀರಪ್ಪ ಡೊಳ್ಳಿನ, ಪ್ರಕಾಶ ಗದಗಿನ, ಶಿವಾನಂದದ ಗಂಧದ, ರಾಜಪ್ಪ ಕೊರ್ಲಹಳ್ಳಿ, ಸಣ್ಣಹನಮಪ್ಪ ಬಂಡಿ, ಹಾಲಪ್ಪ ಡೊಳ್ಳಿನ, ಬೀರಪ್ಪ ಪೂಜಾರ, ರಾಮಪ್ಪ ಹೊಂಬಳ, ಸಿದ್ದಪ್ಪ ಹೊಂಬಳ, ರವಿ ಡೊಳ್ಳಿನ, ಪುಟ್ಟಣ್ಣ ಹಾಡಕರ ಮುಂತಾದವರಿದ್ದರು.

# ಪಂ.ಪಂಚಾಕ್ಷರಿ ಗವಾಯಿ ಮಹಾವಿದ್ಯಾಲಯದಲ್ಲಿ ಗುರುವಂದನಾ



**■ ವಿಜಯಸಾಕ್ಷಿ ಸುದ್ದಿ, ಗದಗ**

ಪಂಡಿತ ಪಂಚಾಕ್ಷರಿ ಗವಾಯಿಗಳವರ ಶಿಕ್ಷಣ ಮಹಾವಿದ್ಯಾಲಯದಲ್ಲಿ 2004–05ನೇ ಸಾಲಿನ ಪ್ರಶಿಕ್ಷಣಾರ್ಥಿಗಳಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು.

ಕಾರ್ಯಕ್ರಮವನ್ನು ವೀರೇಶ್ವರ ಪುಣ್ಯಾಶ್ರಮದ ಪೂಜ್ಯ ಶ್ರೀ ಕಲ್ಲಯ್ಯಜ್ಜನವರು ಉದ್ಘಾಟಿಸಿ ಮಾತನಾಡಿ, 19 ವರ್ಷಗಳ ನಂತರ ತಾವೆಲ್ಲರೂ ಒಂದೆಡೆ ಸೇರಿ ಮಹಾವಿದ್ಯಾಲಯದ ಗುರುಗಳಿಗೆ ಗುರುವಂದನೆ ಅರ್ಪಿಸಿ, ನಮ್ಮ ದೇಶದ ಗುರುಸಂಸ್ಕೃತಿಯನ್ನು ಮೆರೆದಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ವಿರೇಶ ಹಿತ್ತಲಮನಿ, ವಿಶ್ವನಾಥ ಮಾನೆ ಮಾತನಾಡಿದರು. ಅತಿಥಿಗಳಾಗಿ ಬಿ.ಜಿ. ಹಿರೇಮಠ, ಡಾ. ಜಿ.ಎಸ್. ಯತ್ನಟ್ಟಿ, ಎನ್. ಎನ್. ಕಿಂದ್ರಿ, ಎಫ್.ಬಿ. ಅಂಗಡಿ, ಕೆ.ಆರ್. ಹಾಳಕೇರಿ, ಟಿ.ವ್ಹಿ. ಗೋಣೆನ್ನವರ, ಎಂ.ಬಿ. ಮಡ್ಡಿ, ಎಸ್.ಎಂ. ಮುದಕಣ್ಣವರ, ಹೆಚ್.ಪಿ. ಪಾತಾಳಿ, ಲತಾ ಬಾಸ್ಕಿ ಸೇರಿದಂತೆ 2004–05ನೇ ಸಾಲಿನ ಬಿ.ಇಡ್ ವಿದ್ಯಾರ್ಥಿಗಳು, ಮಹಾವಿದ್ಯಾಲಯದ ಉಪನ್ಯಾಸಕರು, ಸಿಬ್ಬಂದಿ ವರ್ಗದರು ಉಪಸ್ಥಿತರಿದ್ದರು. ವಿದ್ಯಾ ಕಲಬುರ್ಗಿ ವಂದನಾರ್ಪಣೆಗೈದರು.

# ಹೂವಿನಶಿಗ್ಗಿ ವಿರಕ್ತಮಠದ ಜಾತ್ರಾಮಹೋತ್ಸವ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಹೂವಿನಶಿಗ್ಗಿ ವಿರಕ್ತಮಠದ ಜಾತ್ರಾಮಹೋತ್ಸವದ ಅಂಗವಾಗಿ ಮಕರ ಸಂಕ್ರಮಣಕಾಲದ ಗೋಧೂಳಿ ಸಮಯದಲ್ಲಿ ಅಪಾರ ಭಕ್ತ ಸಮೂಹದ ನಡುವೆ ಸಕಲ ವಾದ್ಯ ವೈಭವಗಳೊಂದಿಗೆ ಮಹಾರಥೋತ್ಸವ ನೆರವೇರಿತು.



ಬೆಳಿಗ್ಗೆ ನಿರಂಜನ ಶ್ರೀಗಳ ಕರ್ತೃ ಗದ್ದುಗೆ ರುದ್ರಾಭಿಷೇಕ, ವಿಶೇಷ ಹೂವಿನ ಅಲಂಕಾರ ಹಾಗೂ ಮಂಗಳಾರತಿ, ಲಿಂ.ಶ್ರೀಗಳ ಭಾವಚಿತ್ರ ಮೆರವಣಿಗೆ ಹಾಗೂ ಗುರು ಗುಹೆಸಿದ್ದೇಶ್ವರ ಉತ್ಸವ ಮೂರ್ತಿಯ ಮೆರವಣಿಗೆ ಸೂರಣಗಿ ಹಾಗೂ ಯಲವಿಗಿ ಗ್ರಾಮದ ಪುರವಂತರ ವೀರಗಾಸೆಯೊಂದಿಗೆ ನಡೆಯಿತು. ಡೊಳ್ಳು, ನಂದಿಕೋಲು, ಕೀಲುಕುದುರೆ ನೃತ್ಯ, ಸಕಲ ವಾದ್ಯ ವೈಭವದೊಂದಿಗೆ ಅಪಾರ ಭಕ್ತ ಸಮೂಹದೊಂದಿಗೆ ರಥೋತ್ಸವ ಜರುಗಿತು. ಈ ವೇಳೆ ಶ್ರೀಮಠ ಚನ್ನವೀರ ಶ್ರೀಗಳು ಸೇರಿ ಧಾರವಾಡ, ಬೆಳ್ಳಟ್ಟಿ, ಹಿರೇಮಣಕಟ್ಟಿ, ಬಳೂಟಗಿ ಶ್ರೀಗಳು ಉಪಸ್ಥಿತರಿದ್ದು ಭಕ್ತರನ್ನು ಆಶೀರ್ವದಿಸಿದರು. ಬಳಿಕ ಶ್ರೀಮಠದ ಹಳೆಯ ವೈದಿಕ ವಿದ್ಯಾರ್ಥಿಗಳಿಂದ ಪೀಠಾಧ್ಯಕ್ಷರ ತುಲಾಭಾರ ನೆರವೇರಿತು.

# ಜಲಾಶಂಕರ ಜಾತ್ರೆ ಸಂಪನ್ನ

**■ ವಿಜಯಸಾಕ್ಷಿ ಸುದ್ದಿ, ಗದಗ**

ಮಕರ ಸಂಕ್ರಮಣದ ನಿಮಿತ್ತ ನಾಗಾವಿ ತಾಂಡಾದ ಜಲಾಶಂಕರ ಜಾತ್ರೆಯು ಶಂಕರ ಭಗವಾನ್ ದೇವರ ಮಹಾಭಿಷೇಕ, ಬಿಲ್ವಾರ್ಚನೆ, ವಿಶೇಷ ಪೂಜೆಯೊಂದಿಗೆ ವಿಜೃಂಭಣೆಯಿಂದ ನಡೆಯಿತು.



ಗದಗಿನ ಪರಿಸರ ಲೇಔಟ್ ಪ್ರಾಪರ್ಟಿ ಪಾಲುದಾರರಾದ ಮಂಜುನಾಥ ಚಂದಪ್ಪನವರ, ಬಸವರಾಜ ಚಂದಪ್ಪನವರ, ಭರತ್ ಸೂರ್ಯಪ್ರಕಾಶ, ಶಿವಾನಂದ ದಂಡಿನ, ಜಿತೇಂದ್ರ ಬನ್ಸಾಲಿ, ಎಂ.ಆರ್. ಪಾಟೀಲ್, ಮೋತಿಲಾಲ ಥೇಬ್ಬಿ ಇವರನ್ನು ಸನ್ಮಾನಿಸಲಾಯಿತು. ಹಿರಿಯರಾದ ಪಾಂಡಪ್ಪ ಲಮಾಣಿ, ಠಾಕಪ್ಪ ನಾಯಕ, ಹನಮಪ್ಪ ನಾಯಕ, ಸೋಮಪ್ಪ ಲಮಾಣಿ ಮತ್ತು ಅಧ್ಯಕ್ಷರಾದ ಗಣೇಶ ಲಮಾಣಿ, ಅರ್ಚಕರಾದ ಮಲ್ಲಯ್ಯ ಮತ್ತು ಶಂಕರಲಿಂಗ ಮಹಾಸ್ವಾಮಿಗಳು, ನಾಗಾವಿ ತಾಂಡಾ, ಅಡವಿಸೋಮಪುರ ತಾಂಡಾ, ಬೆಳಧಡಿ ತಾಂಡಾ, ಪಾಪನಾಶಿ ತಾಂಡಾ, ಕಳಸಾಪುರ ತಾಂಡಾದ ಗುರು–ಹಿರಿಯರು, ಭಕ್ತಾದಿಗಳು ಹಾಜರಿದ್ದರು.

## ಪ್ರೇಮಾ ಜಕ್ಕನಗೌಡರ ರಾಜ್ಯ ಪಥ ಸಂಚಲನಕ್ಕೆ ಆಯ್ಕೆ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಪ್ರೇಮಾ ಜಕ್ಕನಗೌಡರ ರಾಜ್ಯ ಪಥ ಸಂಚಲನಕ್ಕೆ ಆಯ್ಕೆಯಾಗಿದ್ದಾರೆ. ವಿಜಯಪುರ ವಿಭಾಗೀಯ ಅಧಿಕಾರಿ ಎಮ್ ಎಸ್ ಮುಲ್ಲಾ ಹಾಗೂ ಎನ್ ಎಸ್ ಎಸ್ ಕಾರ್ಯಕ್ರಮ ಅಧಿಕಾರಿ ಶ್ರೀನಿವಾಸ ಬಡಿಗೇರ ಇವರ ಮಾರ್ಗದರ್ಶನದಲ್ಲಿ ಬೆಂಗಳೂರಿನ ಮಾಣಿಕ್ಷಾ ಮೈದಾನದಲ್ಲಿ ಜನವರಿ 26ರಂದು ನಡೆಯಲಿರುವ ರಾಜ್ಯ ಮಟ್ಟದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾಲೇಜಿನ ಪ್ರಾಚಾರ್ಯರು ಹಾಗೂ ಉಪನ್ಯಾಸಕ ವೃಂದ, ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಹಾಗೂ ಸರ್ವಸದಸ್ಯರು ವಿದ್ಯಾರ್ಥಿನಿಯ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಪೊಲೀಸ್ ಸಿಬ್ಬಂದಿಗಳ ವೈದ್ಯಕೀಯ ವೆಚ್ಚ 1,500 ರೂ.ಗೆ ಹೆಚ್ಚಳ: ಸಿಎಂ ಸಿದ್ದರಾಮಯ್ಯ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯದ ಎಲ್ಲಾ ಪೊಲೀಸ್ ಸಿಬ್ಬಂದಿಗೆ ಬೆಳ್ಳಿ ಪದಕ ನೀಡಲಾಗುವುದು ಮತ್ತು ವೈದ್ಯಕೀಯ ವೆಚ್ಚವನ್ನು 1 ಸಾವಿರದಿಂದ 1,500 ರೂ.ಗೆ ಹೆಚ್ಚಳ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಘೋಷಿಸಿದ್ದಾರೆ. ರಾಜ್ಯದಲ್ಲಿ ಭವ್ಯವಾದ ಸುಸಜ್ಜಿತ ಸುವರ್ಣ ಪೊಲೀಸ್ ಭವನ ನಿರ್ಮಾಣ ಮಾಡಲಾಗುವುದು. ಇದಕ್ಕಾಗಿ ಬಜೆಟ್ ನಲ್ಲಿ ಹಣ ನಿಗದಿ ಮಾಡುತ್ತೇನೆ. ಸಿಇಎನ್ ಠಾಣಾಧಿಕಾರಿಗಳ ಹುದ್ದೆಯನ್ನು ಎಸಿಪಿ ಮತ್ತು ಡಿಸಿಪಿ ಮಟ್ಟಕ್ಕೆ ಉನ್ನತೀಕರಿಸಲಾಗುವುದು ಮತ್ತು ಬೆಂಗಳೂರು ನಗರದಲ್ಲಿ 8 ಅಡಿಷನಲ್ ಡಿಸಿಪಿ ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಜಿಸಲಾಗುವುದು ಎಂದು ಸಿಎಂ ಹೇಳಿದ್ದಾರೆ.

### ಬೀಗ ಹಾಕಿ ಹೋದ ಮನೆಗಳನ್ನು ಗುರುತಿಸಿ ಕೈಚಳಕ ತೋರಿದ ಕಳ್ಳರು

# ಸರಣಿ ಕಳ್ಳತನಕ್ಕೆ ಬೆಚ್ಚಿದ ಜನತೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಲಕ್ಷ್ಮೀ ನಗರದಲ್ಲಿನ ನಾಲ್ಕು ಮನೆಗಳಿಗೆ ಕನ್ನ ಹಾಕಿದ ಕಳ್ಳರು ಹಣ, ಚಿನ್ನಾಭರಣ ದೋಚಿ ಪರಾರಿಯಾದ ಘಟನೆ ಸೋಮವಾರ ತಡರಾತ್ರಿ ನಡೆದಿದೆ. ಈ ಸರಣಿ ಕಳ್ಳತನದಿಂದ ಸಾರ್ವಜನಿಕರು ಭೀತಿಗೊಳಗಾಗಿದ್ದಾರೆ.

ರಾತ್ರಿ 2 ಗಂಟೆ ಹೊತ್ತಿಗೆ ಪಟ್ಟಣದ ಕೆಂಪಿಗೇರಿ ಮೇಲಿನ ಪ್ರದೇಶದ ಲಕ್ಷ್ಮೀ ನಗರದಲ್ಲಿನ ಸತೀಶ ಫಕ್ಕೀರಪ್ಪ ಮೇಟಿ, ಅರವಿಂದ ಕಮೋಜಿ, ಶಿವಯೋಗಿ ಕಟ್ಟೆಣ್ಣವರ ಮತ್ತು ಲತಾ ತೆಂಗಿನಮಠ ಅವರ ಮನೆಗಳ ಸೆಂಟರ್ ಲಾಕ್, ಬೀಗ ಮುರಿದು ಒಳ ನುಗ್ಗಿದ ಕಳ್ಳರು ಹಣ ಮತ್ತು ಚಿನ್ನಾಭರಣ ಕದ್ದಿದ್ದಾರೆ.


ಸಂಕ್ರಮಣ ಹಬ್ಬಕ್ಕೆ ಬೀಗ ಹಾಕಿ ಊರಿಗೆ ಹೋದ ಮನೆಗಳನ್ನು ಗುರುತಿಸಿದ ಕಳ್ಳರು ತಮ್ಮ ಕೈಚಳಕ ತೋರಿದ್ದಾರೆ. ಈ ನಾಲ್ಕು ಮನೆಯಲ್ಲಿನ ಟ್ರೆಜರಿಗಳನ್ನು ತೆಗೆದು, ಒಳಗಿದ್ದ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿ, ಹಣ ಮತ್ತು ಆಭರಣ ದೋಚಿದ್ದಾರೆ. ಬೆಲೆ ಬಾಳುವ ಬೆಳ್ಳಿ ಆಭರಣಗಳನ್ನು ಮುಟ್ಟಿಲ್ಲ. ಆದರೆ ಅದೃಷ್ಟವಶಾತ್ ಮೇಟಿಯವರ ಮನೆ



ಹೊರತುಪಡಿಸಿ ಉಳಿದ ಮೂರು ಮನೆಯಲ್ಲಿ ಅವರಿಗೆ ಯಾವುದೇ ಹಣ/ಆಭರಣ ಸಿಕ್ಕಿಲ್ಲ. ಆದರೆ ಈ ರೀತಿ ಸಾಲುಮನೆಗಳಿಗೆ ಕಳ್ಳರು ನುಗ್ಗಿರುವುದು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ. ಘಟನೆಯ ಬಳಿಕ ಸ್ಥಳಕ್ಕೆ ಪೊಲೀಸರು, ಶ್ವಾನದಳ, ಬೆರಳಚ್ಚು ತಜ್ಞರು ಭೇಟಿ ನೀಡಿ ಪೂರ್ಣ ಮಾಹಿತಿ ಕಲೆಹಾಕಿದ್ದಾರೆ. 1.20 ಲಕ್ಷ ಹಣ, ಚಿನ್ನದ ಬೆಂಡವಾಲಿ-ಜುಮಕಿ ಕಳ್ಳತನವಾಗಿರುವ ಬಗ್ಗೆ ನಿವಾಸಿ ಸತೀಶ ಮೇಟಿ ಅವರಿಂದ ಮಾಹಿತಿ ಪಡೆದ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಳ್ಳರ ಪತ್ತೆಗೆ ಜಾಲ ಬೀಸಿದ್ದಾರೆ.

> ಸಾರ್ವಜನಿಕರು ಮನೆ ಬೀಗ ಹಾಕಿ ಹೋಗುವ ವೇಳೆ ಮನೆಯಲ್ಲಿನ ಹಣ-ಚಿನ್ನದ ಆಭರಣಗಳ ಸುರಕ್ಷತೆಯ ಬಗ್ಗೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಹೋಗುವಾಗ ಅಕ್ಕ-ಪಕ್ಕದ ಆತ್ಮೀಯರಿಗೆ, ನಂಬಿಕಸ್ಥರಿಗೆ ಮಾಹಿತಿ ನೀಡಬೇಕು, ಇಲ್ಲವೇ ಮನೆಯಲ್ಲಿ ಸಂಬಂಧಿಕರನ್ನು ಬಿಟ್ಟು ಹೋಗಬೇಕು. ಸಾಧ್ಯವಾದರೆ ವೈಯಕ್ತಿಕ ಇಲ್ಲವೇ ಸಾಮೂಹಿಕವಾಗಿ ಸಿಸಿ ಕ್ಯಾಮರಾ ಅಳವಡಿಸಿಕೊಳ್ಳಬೇಕು. ಮುಖ್ಯವಾಗಿ ಪಟ್ಟಣ ಸೇರಿ ಗ್ರಾಮೀಣ ಭಾಗದ ಹೊರ ವಲಯದ ನಿವಾಸಿಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಅಗತ್ಯ ಸಂದರ್ಭದಲ್ಲಿ ಪೊಲೀಸರಿಗೆ ಮಾಹಿತಿ ನೀಡಬೇಕು.
>
> – ವಿ.ಜಿ ಪವಾರ.
> ಕ್ರೈಂ ಪಿಎಸ್‌ಐ, ಲಕ್ಷ್ಮೇಶ್ವರ.

## ಜೆಡಿಎಸ್ ರಾಜ್ಯ ವಕ್ತಾರರಾಗಿ ವೆಂಕನಗೌಡ ಗೋವಿಂದ್ರಗೌಡ್ರ ನೇಮಕ



■ ವಿಜಯಸಾಕ್ಷಿ ಸುದ್ದಿ, ಗದಗ

ಜಾತ್ಯಾತೀತ ಜನತಾ ದಳ (ಜೆಡಿಎಸ್) ರಾಜ್ಯ ವಕ್ತಾರರಾಗಿ ಯಂಗ್ ಇಂಡಿಯಾ ಪರಿವಾರದ ಸಂಸ್ಥಾಪಕ, ಜೆಡಿಎಸ್ ಮುಖಂಡ ವೆಂಕನಗೌಡ ಗೋವಿಂದಗೌಡ್ರ ನೇಮಕವಾಗಿದ್ದಾರೆ.

ಈ ಕುರಿತು ಪಕ್ಷದ ರಾಜ್ಯಾಧ್ಯಕ್ಷ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅಧಿಕೃತ ಆದೇಶ ಹೊರಡಿಸಿದ್ದು, ರಾಜ್ಯಾದ್ಯಂತ ಪಕ್ಷ ಸಂಘಟನೆ ಹಾಗೂ ಪಕ್ಷದ ವಕ್ತಾರರಾಗಿ ಸೇವೆ ಸಲ್ಲಿಸುವಂತೆ ಸೂಚನೆ ನೀಡಿದ್ದಾರೆ.

ವೆಂಕನಗೌಡ ಗೋವಿಂದಗೌಡ್ರ 2023ರ ವಿಧಾನಸಭೆ ಚುನಾವಣೆಯಲ್ಲಿ ಗದಗ ಮತಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಅವರ ಸಾಮಾಜಿಕ ಸೇವೆಯನ್ನು ಪರಿಗಣಿಸಿ ರಾಜ್ಯ ವಕ್ತಾರ ಹುದ್ದೆ ನೀಡಲಾಗಿದೆ ಎಂದು ಜೆಡಿಎಸ್ ಕಾರ್ಯಾಧ್ಯಕ್ಷ ಅಲ್ಕೋಡ ಹನುಮಂತಪ್ಪ ತಿಳಿಸಿದ್ದಾರೆ.

ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಹಾಗೂ ಪ್ರಧಾನ ಕಾರ್ಯದರ್ಶಿ ಅಲ್ಕೋಡ ಹನುಮಂತಪ್ಪ ಅವರು ನನ್ನ ಮೇಲೆ ವಿಶ್ವಾಸವಿಟ್ಟು ರಾಜ್ಯ ವಕ್ತಾರನನ್ನಾಗಿ ಮಾಡಿದ್ದಾರೆ.

ಪಕ್ಷವನ್ನು ಬೇರು ಮಟ್ಟದಿಂದ ಸಂಘಟಿಸುವ ಜೊತೆಗೆ ನನಗೆ ವಹಿಸಿರುವ ವಕ್ತಾರ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸತ್ತೇನೆ ಎಂದು ವೆಂಕನಗೌಡ ಆರ್. ಗೋವಿಂದಗೌಡ್ರ ಪ್ರತಿಕ್ರಿಯಿಸಿದರು.

## ಜಾನಪದ ಕಲೆಯನ್ನು ಉಳಿಸಬೇಕಿದೆ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಕಳಸಾಪೂರ ರಸ್ತೆಯ ವಿಶ್ವೇಶ್ವರಯ್ಯ ನಗರದ ವಿಘ್ನೇಶ್ವರ ಸೇವಾ ಸಮಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ಆಶ್ರಯದಲ್ಲಿ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮವನ್ನು ಗದಗ-ಬೆಟಗೇರಿಯ ಮಾಜಿ ಅಧ್ಯಕ್ಷ ಪ್ರಕಾಶ ಬೊಮ್ಮನಹಳ್ಳಿ ಉದ್ಘಾಟಿಸಿ ಮಾತನಾಡಿ, ಜನಪದ ಸಾಹಿತ್ಯ ಅನಕ್ಷರಸ್ಥ ಜನಪದರ ನಾಲಗೆಯ ಮೇಲೆ ಜೀವಂತವಾಗಿದೆ. ಇದು ಸಾಮೂಹಿಕ ಸೃಷ್ಟಿ. ಭಾಷೆಯ ಮೂಲ ಬೇರು ಜನಪದ ಸಾಹಿತ್ಯ, ಇಂತಹ ಸಾಹಿತ್ಯ ಒಂದು ಕಾಲದಲ್ಲಿ ಜನರಿಂದ ತಿರಸ್ಕೃತವಾಗಿ ಕಣ್ಮರೆಯಾಗುತ್ತಿತ್ತು. ಇಂದು ಮತ್ತೆ ಪ್ರಚಲಿತಕ್ಕೆ ಬರುತ್ತಿದೆ. ಅದನ್ನು ಉಳಿಸಿ-ಬೆಳೆಸುವ ಜವಾಬ್ದಾರಿ ಯುವ ಪೀಳಿಗೆಯ ಮೇಲಿದೆ ಎಂದರು.

ಈ ಸಂದರ್ಭದಲ್ಲಿ ದೇವಾಲಯ ಸಮಿತಿ ಅಧ್ಯಕ್ಷ ರವೀಂದ್ರರಡ್ಡಿ ಇನಾಮತಿ, ರಾಜಶೇಖರಯ್ಯ ಹಿರೇಮಠ, ಪ್ರಾಚಾರ್ಯ ಸಿ. ಲಿಂಗಾರೆಡ್ಡಿಯವರ, ಬೊಮ್ಮಪ್ಪಗೌಡ್ರ, ಎಂ.ಎಚ್. ಹುಲ್ಲೂರ, ಪ್ರಕಾಶ ಬೆಂತೂರ, ಸತೀಶ ಹೆಗಡೆಕಟ್ಟಿ, ಆರ್.ವಿ. ಬೆಲಹುಣಸಿ, ರವಿ ಬೆಂತೂರ, ಮುಜುಂದಾರ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಜನಪದ ಕಲಾವಿದರಾದ ರೇಣವ್ವ ಗೊಶಲ್ಯಾನವರ, ಮಲ್ಲಿಕಾರ್ಜುನ ಗೊಶಲ್ಯಾನವರ, ಲತಾ ಮಾಂಡ್ರೆ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಿದರು. ಎಂ.ಎಚ್. ಹುಲ್ಲೂರ ಕಾರ್ಯಕ್ರಮ ನಿರೂಪಿಸಿದರು.

## ಅಯೋಧ್ಯಾ ಮಂತ್ರಾಕ್ಷತೆ ವಿತರಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ನರಸಾಪೂರ ಗ್ರಾಮದ ಖಾದಿ ನಗರದಲ್ಲಿ ಅಯೋಧ್ಯಾ ಮಂತ್ರಾಕ್ಷತೆಯನ್ನು ನಾಗರಿಕ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳು ಮನೆ-ಮನೆಗಳಿಗೆ ತೆರಳಿ ವಿತರಿಸಿದರು.

ಮಂತ್ರಾಕ್ಷತೆಯೊಂದಿಗೆ ಶ್ರೀರಾಮ ಜನ್ಮಭೂಮಿ ಮಂದಿರದ ವಿವರಣೆ, ಪರಿಚಯ ಹಾಗೂ ನಿವೇದನೆ ಪತ್ರ, ಮಂದಿರದ ಫೋಟೊವನ್ನು ವಿತರಿಸಲಾಯಿತು.

ಜ. 22ರಂದು ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ನಡೆಯಲಿದ್ದು, ಅಂದು ನಾವು ಮನೆಯಲ್ಲಿ ಕೈಗೊಳ್ಳಬಹುದಾದ ಧಾರ್ಮಿಕ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಲಾಯಿತು.

ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಕೆ.ಎಸ್. ಹಿರೇಮಠ, ಕಾರ್ಯದರ್ಶಿ ಸಿ.ವಿ. ಪವಾಡಶೆಟ್ಟರ, ಎಸ್.ವಿ. ಗುರ್ಲಹೊಸೂರ, ಜಯರಾಮ ನೆಗಳೂರ, ಬಸವರಾಜ ಕಿತ್ತೂರ, ಶಂಕ್ರಯ್ಯ ಹಿರೇಮಠ ಮುಂತಾದವರಿದ್ದರು.

## ಮಠ-ಮಾನ್ಯಗಳ ಕಾರ್ಯಕ್ಕೆ ಯುವಕರು ಕೈಜೋಡಿಸಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಧರ್ಮ, ಸಂಸ್ಕೃತಿ, ಶಿಕ್ಷಣ, ಆಚಾರ-ವಿಚಾರ, ಮೌಲ್ಯಗಳನ್ನು ಬಿತ್ತುವ ಮೂಲಕ ಸಾಮಾಜಿಕ ಪ್ರಗತಿಯಲ್ಲಿ ಮಠ-ಮಾನ್ಯಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮಠ-ಮಾನ್ಯಗಳ ಈ ಕಾರ್ಯಕ್ಕೆ ಯುವಕರು ಕೈ ಜೋಡಿಸಬೇಕು ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಹೇಳಿದರು.


ಅವರು ಸಮೀಪದ ಹೂವಿನಶಿಗ್ಲಿಯ ವಿರಕ್ತಮಠದ ಜಾತ್ರಾಮಹೋತ್ಸವ, ಲಿಂ. ನಿರಂಜನ ಸ್ವಾಮಿಗಳ ಪುಣ್ಯಸ್ಮರಣೋತ್ಸವ ನಿಮಿತ್ತ ನಡೆದ ಧರ್ಮಸಭೆ, ತುಲಾಭಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಜಾತ್ರೆ, ಹಬ್ಬ-ಹರಿದಿನಗಳು ಪರಸ್ಪರರಲ್ಲಿ ಸ್ನೇಹ, ಬಾಂಧವ್ಯ, ಸೌಹಾರ್ದತೆ, ನಾವೆಲ್ಲ ಒಂದು ಎಂಬ ಭಾವನೆ ಬೆಸೆಯುತ್ತವೆ. ಜಾತ್ರೆಗಳ ಆಚರಣೆಯ ಸಂದರ್ಭದಲ್ಲಿ ಮಠಮಾನ್ಯಗಳು ಆಚರಿಸಿಕೊಂಡು ಬರುತ್ತಿರುವ ಧಾರ್ಮಿಕ, ಸಾಮಾಜಿಕ ಕಾರ್ಯಗಳು ಸಮಾಜದ ಶ್ರೇಯೋಭಿವೃದ್ಧಿಗೆ ಮೂಲಾಧಾರವಾಗಿದೆ.

ಭಾರತ ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ಸಾಂಸ್ಕೃತಿಕ ಶ್ರೀಮಂತ ರಾಷ್ಟ್ರವಾಗಿದೆ. ಯುವಕರು ದೇಶದ ಸಂಪತ್ತಾಗಿದ್ದು, ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರನ್ನು ಆದರ್ಶವಾಗಿಟ್ಟುಕೊಂಡು ನಮ್ಮ ದೇಶದ ಧರ್ಮ, ಸಂಸ್ಕೃತಿ, ಪರಂಪರೆಗಳನ್ನು ಮುಂದುವರೆಸಿಕೊಂಡು ಹೋಗುವ ಕಾರ್ಯ ಮಾಡಬೇಕು ಮತ್ತು ಮಾಡುವವರಿಗೆ ಬೆಂಬಲವಾಗಿರಬೇಕು. ಜನಕಲ್ಯಾಣಕ್ಕಾಗಿ ತಮ್ಮನ್ನೇ ಸಮರ್ಪಿಸಿಕೊಂಡ ಬಸವಾದಿ ಶರಣರ, ಸಂತರ, ಮಹಾತ್ಮರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಕೊಳ್ಳಬೇಕು ಎಂದರು.

ಈ ವೇಳೆ ಹೂವಿನಶಿಗ್ಲಿ ಶ್ರೀ ಚನ್ನವೀರಮಹಾಸ್ವಾಮಿಗಳು, ಹಿರೇಮಲ್ಲಕೇರಿಯ ಬಸವರಾಜ ಮಹಾಸ್ವಾಮಿಗಳು, ಹುಲ್ಯಾಳದ ಶ್ರೀದೇವಿತಾಯಿ ಹಿರೇಮಠ, ಗುಡ್ಡದನ್ವೇರಿಯ ಶಿವಯೋಗೀಶ್ವರ ಮಹಾಸ್ವಾಮಿಗಳು, ಬಳೂಟಗಿಯ ಶಿವಕುಮಾರ ದೇವರು, ಮಠದ ಭಕ್ತ ಮಂಡಳಿ ಇದ್ದರು.

## ಕೊಪ್ಪರ್ ಅಕಾಡೆಮಿಯಲ್ಲಿ ಸ್ವಾಮಿ ವಿವೇಕಾನಂದ ಜಯಂತಿ



■ ವಿಜಯಸಾಕ್ಷಿ ಸುದ್ದಿ, ಗದಗ

ಪರಿವ್ರಾಜಕ ಸನ್ಯಾಸಿ, ತತ್ವಜ್ಞಾನಿ, ಜಗತ್ತು ಕಂಡ ಸಂತ ಶ್ರೇಷ್ಠ ಶ್ರೀ ಸ್ವಾಮಿ ವಿವೇಕಾನಂದರ 161ನೇ ಜಯಂತ್ಯುತ್ಸವವನ್ನು ಇಲ್ಲಿನ ಕೊಪ್ಪರ್ ಅಕಾಡೆಮಿಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಶ್ರೀ ಪ್ರವೀಣಕುಮಾರ ಜಮಖಂಡಿ ಹಾಗೂ ಸುನೀಲ ಹಲಕುರ್ಕಿಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.

ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ರಾಷ್ಟ್ರೀಯ ಯುವ ದಿನವೆಂದು ಆಚರಿಸಲಾಗುತ್ತದೆ. ಇದು ರಾಷ್ಟ್ರೀಯ ಯುವಕರನ್ನು ಪ್ರೇರೇಪಿಸುವ ಹಾಗೂ ಸಬಲೀಕರಣಗೊಳಿಸುವ ಸಾಮಾಜಿಕ ಪ್ರಯತ್ನವಾಗಿದೆ. ರಾಮಕೃಷ್ಣ ಪರಮಹಂಸ ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರು ಗುರುಗಳ ದೈವಿಕ ಅಭಿವ್ಯಕ್ತಿಗಳ ಹಾಗೂ ಆಧ್ಯಾತ್ಮಿಕ ಬೋಧನೆಗಳು ಅವರ ಮನಸ್ಸಿಗೆ ಅಪಾರ ಪರಿಣಾಮ ಬೀರಿದವು ಎಂದು ಅತಿಥಿಗಳು ನುಡಿದರು.

ಶ್ರೀಕಾಂತ ರವೀಂದ್ರ ಕೊಪ್ಪರ ಅವರ ಕಲಿಕಾರ್ಥಿಗಳಾದ ಶರಣು ಇಟಗಿ, ಜಗದೀಶ, ಮಹಾಂತೇಶ ಕೊಟ್ಟುರ ಸ್ವಾಮೀಜಿಗಳ ಕುರಿತು ಮಾತನಾಡಿದರು. ರಮೇಶ ಕೋತಂಬರಿ, ವಿನಾಯಕ ಹೊರಕೇರಿ, ಗುರುರಾಜ ಕುಲಕರ್ಣಿ, ಕುಮಾರ ಪಟ್ಟೇದ ಮುಂತಾದವರು ಉಪಸ್ಥಿತರಿದ್ದರು.


### ಶ್ರೀರಾಮನ ಕೀರ್ತನೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಂ. ರತ್ನಾಕರ ಜೋಶಿ

# ರಾಮ ಜಪ ನೆಮ್ಮದಿಯ ಜೀವನಕ್ಕೆ ದಾರಿ

■ ವಿಜಯಸಾಕ್ಷಿ ಸುದ್ದಿ, ಗದಗ

ದೇಶದ ಸಮಸ್ತ ಹಿಂದೂಗಳ ಐದು ಶತಮಾನಗಳ ಕನಸಾಗಿರುವ ಪುರುಷೋತ್ತಮ ಪ್ರಭು ಶ್ರೀರಾಮನಚಂದ್ರನ ಭವ್ಯ ಮಂದಿರ ಜ.22ರಂದು ಲೋಕಾರ್ಪಣೆಗೊಳ್ಳುತ್ತಿರುವದು ಹೆಮ್ಮೆಯ ಸಂಗತಿ ಎಂದು ಶ್ರೀರಾಮ ಸೇನಾ ರಾಜ್ಯ ಕಾರ್ಯದರ್ಶಿ ರಾಜು ಖಾನಪ್ಪನವರ ಹೇಳಿದರು.

ಅವರು ಬಸವೇಶ್ವರ ನಗರದ ಪಂಚಮೂರ್ತಿ ಹಾಗೂ ನವಗ್ರಹ ದೇವಸ್ಥಾನದ ಬಳಿ ಶ್ರೀರಾಮ ಸೇನಾ ಗದಗ ಜಿಲ್ಲಾ ಘಟಕದ ವತಿಯಿಂದ ಅಯೋಧ್ಯೆಯಲ್ಲಿ ಪ್ರಭು ಶ್ರೀರಾಮಚಂದ್ರನಪ್ರಾಣ ಪ್ರತಿಷ್ಠಾಪನೆ ಹಾಗೂ ಭವ್ಯ ಶ್ರೀರಾಮ



> ಕಾರ್ಯಕ್ರಮವನ್ನು ಉದ್ಘಾಟಿಸಿದ ಆಧ್ಯಾತ್ಮಿಕ ಚಿಂತಕ ಪಂ. ರತ್ನಾಕರ ಜೋಶಿಯವರು ಮಾತನಾಡಿ, ರಾಮ ಜಪದಿಂದ ನಮ್ಮ ಸರ್ವ ಕಷ್ಟಗಳ ನಿವಾರಣೆಗೆ ಹಾಗೂ ನೆಮ್ಮದಿ ಜೀವನಕ್ಕೆ ಸುಗಮದಾರಿ ಎಂದು ತಿಳಿಸಿದರು. ಕುರ್ತಕೋಟಿ ಕೀರ್ತನಕಾರರಾದ ಪಂ. ದಿಗಂಬರ ಶಾಸ್ತ್ರಿಗಳು ತಮ್ಮ ವಿಭಿನ್ನ ಶೈಲಿಯಲ್ಲಿ ಕೀರ್ತನೆಯನ್ನು ಪ್ರಸ್ತುತಪಡಿಸಿದರು. ಬೆಳದಡಿಯ ಕಿರಣ ಇನಾಮದಾರ ತಬಲಾ ಮತ್ತು ಸಂಗೀತ ಶಿಕ್ಷಕರಾದ ಶ್ರೀಕಾಂತ ಹೂಲಿಯವರು ಹಾರ್ಮೋನಿಯಂ ಸಾಥ್ ನೀಡಿದರು.

ಮಂದಿರ ಲೋಕಾರ್ಪಣೆ ನಿಮಿತ್ತ ಶ್ರೀರಾಮೋತ್ಸವದ ಅಂಗವಾಗಿ ಶ್ರೀರಾಮನ ಕೀರ್ತನೆ (ಪ್ರವಚನ) ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ ನಗರಸಭಾ ಸದಸ್ಯ ಚಂದ್ರಶೇಖರ ತಡಸದ, ಪಂಚಮೂರ್ತಿ ಹಾಗೂ ನವಗ್ರಹ ದೇವಸ್ಥಾನದ ಸಲಹಾ ಸಮಿತಿ ಸದಸ್ಯ ಭೀಮರೆಡ್ಡಿ ದೇವರೆಡ್ಡಿ ಕಿಲಬನವರ ಮಾತನಾಡಿದರು. ಸಮಾರಂಭದ ಅತಿಥಿಗಳಾಗಿ ಶಿವಪುತ್ರಪ್ಪ ಬೇವಿನಮರದ, ಗುರುಬಸವಲಿಂಗ ದಾನಪ್ಪ ತಡಸದ, ಬಸವರಾಜ ದೇಗುಲ, ಶ್ರೀರಾಮ ಸೇನಾ ಮುಖಂಡರಾದ ಸೋಮು ಗುಡಿ, ಮಹೇಶ ರೋಖಡೆ, ದಾನೇಶ ತಡಸದ, ಶರಣೇಶ ಇಟಗಿ, ಕುಮಾರ ಮಾರನಬಸರಿ, ಅನಿಲ ಶೆಟ್ಟರ, ನಾಗರಾಜ ಹಳ್ಳಿಕೇರಿ, ರಾಜೋಟಿ ಕಾಡಪ್ಪನವರ, ನಾಗರಾಜ ಕಾಳಗಿ, ವೆಂಕಟೇಶ ದೊಡ್ಡಮನಿ, ವಿಶ್ವನಾಥ ಇಟಗಿ, ಸುನೀಲ ಮುಳ್ಳಾಳ, ಸಂಜು ಚೆಟ್ಟಿ, ಭರತ ಲಕ್ಕುಂಡಿ, ವೀರೇಂದ್ರ ಬಾಳಿಗೇರಿ, ಕಾರ್ತಿಕ ಭಜಂತ್ರಿ, ಅಕ್ಷಯ ವಿಶ್ವಕರ್ಮ, ನಾಗರಾಜ ಕೋಟಿಗೌಡ್ರ, ಸಮರ್ಥ ನವಲೂರ, ದರ್ಶನ ಮಡಿವಾಳರ, ಮಂಜುನಾಥ ಭಜಂತ್ರಿ, ಶಿವರಾಜ ಬೇವಿನಮರದ, ಶುಭಂ ಮಾನೆ, ಈರಣ್ಣ ಗಾಣಿಗೇರ, ಶಂಕರ ಕಾರದಕಟ್ಟಿ, ಗಗನ ಗೋಕಾವಿ ಮುಂತಾದವರು ಉಪಸ್ಥಿತರಿದ್ದರು.

ಅಂಜಲಿ ಚನ್ನಪ್ಪಗೌಡ್ರ ನಿರೂಪಿಸಿದರು. ಸತೀಶ ಕುಂಬಾರ, ಕಿರಣ ಹಿರೇಮಠ ನಿರ್ವಹಿಸಿದರು. ವಿಶ್ವನಾಥ ಶೀರಿ ವಂದಿಸಿದರು.

## ಪುಸ್ತಕ ಬಹುಮಾನಕ್ಕಾಗಿ ಕೃತಿಗಳ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರತಿ ವರ್ಷದಂತೆ 2022ನೇ ವರ್ಷದ ಪುಸ್ತಕ ಬಹುಮಾನ ಯೋಜನೆಗಾಗಿ ವಿವಿಧ ಪ್ರಕಾರಗಳ ಕನ್ನಡ ಪುಸ್ತಕಗಳನ್ನು ಸಲ್ಲಿಸಲು ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿ ಪ್ರಕಾರದಲ್ಲಿ ವಿಮರ್ಶಕರು ಆಯ್ಕೆ ಮಾಡುವ ಒಂದು ಕೃತಿಗೆ ಬಹುಮಾನ ನೀಡಲಾಗುವುದು. ಬಹುಮಾನಕ್ಕೆ ಸಲ್ಲಿಸುವ ಕೃತಿಗಳು 2022ರ ಜನವರಿ 01 ರಿಂದ 2022 ರ ಡಿಸೆಂಬರ್ 31 ರೊಳಗೆ ಪ್ರಥಮ ಆವೃತ್ತಿಯಾಗಿ ಪ್ರಕಟವಾಗಿರುವ ಕೃತಿಗಳಾಗಿರಬೇಕು. ಕೃತಿಯಲ್ಲಿ ಪ್ರಥಮ ಮುದ್ರಣ 2022 ಎಂದು ಮುದ್ರಿತವಾಗಿರಬೇಕು.

ಮರುಮುದ್ರಣವಾದ ಪುಸ್ತಕಗಳು, ಪಿ.ಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ ಸಂಶೋಧನಾ ಗ್ರಂಥಗಳು, ಪಠ್ಯಪುಸ್ತಕಗಳು, ಅಕಾಡೆಮಿಯ ಗೌರವ ಪ್ರಶಸ್ತಿಗಾಗಿ ಪುರಸ್ಕೃತ ಸಾಹಿತಿಗಳ ಕೃತಿಗಳು, ಈಗಾಗಲೇ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಒಟ್ಟಾರೆ ಮೂರು ಬಾರಿ ಪುಸ್ತಕ ಬಹುಮಾನ ಪಡೆದವರ ಕೃತಿಗಳು ಹಾಗೂ ಒಂದು ಪ್ರಕಾರದಲ್ಲಿ ಒಂದು ಬಾರಿ ಪುಸ್ತಕ ಬಹುಮಾನ ಪಡೆದವರ ಕೃತಿಗಳನ್ನು ಮತ್ತದೇ ಪ್ರಕಾರದಲ್ಲಿ ಮುಂದಿನ ಮೂರು ವರ್ಷದವರಗೆ ಪರಿಗಣಿಸುವುದಿಲ್ಲ.

ಒಬ್ಬ ಲೇಖಕರಿಗೆ ಮೂರು ಬಾರಿ ಬೇರೆ ಬೇರೆ ಪ್ರಕಾರಗಳಲ್ಲಿ ಬಹುಮಾನ ಪಡೆಯುವ ಅವಕಾಶವಿರುತ್ತದೆ. ಮೇಲ್ಕಂಡ ಅವಧಿಯಲ್ಲಿ ಪ್ರಕಟವಾದ ಪುಸ್ತಕಗಳ ತಲಾ 4 ಪ್ರತಿಗಳನ್ನು ರಿಜಿಸ್ಟ್ರಾರ್ , ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ. ರಸ್ತೆ , ಬೆಂಗಳೂರು– 560 002 ಇವರಿಗೆ ರಿಜಿಸ್ಟರ್ ಅಂಚೆ/ ಕೋರಿಯರ್ ಮೂಲಕ ಅಥವಾ ಖುದ್ದಾಗಿ ಫೆಬ್ರುವರಿ 20ರೊಳಗೆ ತಲುಪಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ದೂರವಾಣಿ ಸಂಖ್ಯೆ 080–22211730/ 22106460 ಸಂಪರ್ಕಿಸಬಹುದಾಗಿದೆ.

### ಜ.17, 18ರಂದು ಕೋರಿಖುಕೋಡಿಯಲ್ಲಿ 7ನೇ ರಾಷ್ಟ್ರೀಯ ಅಟ್ಯಾಪಟ್ಯಾ ಫೆಡರೇಷನ್ ಕಪ್

## ಒಗ್ಗಟ್ಟಾಗಿ ಸಮಯೋಚಿತ ಪ್ರದರ್ಶನ ನೀಡಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಜ.17, 18ರಂದು ಕೇರಳದ ಕೋಝಿಕೋಡಿಯಲ್ಲಿ 7ನೇ ರಾಷ್ಟ್ರೀಯ ಅಟ್ಯಾಪಟ್ಯಾ ಚಾಂಪಿಯನ್‌ಶಿಪ್ ಪಂದ್ಯಾವಳಿಗಳು ನಡೆಯಲಿವೆ ಎಂದು ಚೈತನ್ಯ ಕ್ರೀಡಾ ಸಂಸ್ಥೆಯ ಅಧ್ಯಕ್ಷ ನಿಂಗರಾಜ ಬೇವಿಕಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಜ.8ರಿಂದ 15ರವರೆಗೆ ಒಂದು ವಾರ ಕಾಲ ಸಮೀಪದ ಜಕ್ಕಲಿಯ ಸರಕಾರಿ ಪ್ರಾಥಮಿಕ ಶಾಲೆಯ ಮೈದಾನದಲ್ಲಿ ಕರ್ನಾಟಕ ಅಟ್ಯಾಪಟ್ಯಾ ಅಸೋಶಿಯೇಷನ್‌ನ ಸಹಭಾಗಿತ್ವದಲ್ಲಿ ಹಮ್ಮಿಕೊಂಡಿದ್ದ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಜರುಗಿತು. ಈ ಸಂದರ್ಭದಲ್ಲಿ ಸರಕಾರಿ ಪ್ರೌಢಶಾಲಾ ಹಿರಿಯ ದೈಹಿಕ ಶಿಕ್ಷಕ ಆರ್.ಎಸ್. ನರೇಗಲ್ಲ ಮಾತನಾಡಿ, ಚೈತನ್ಯ ಕ್ರೀಡಾ ಸಂಸ್ಥೆಯ ತರಬೇತುದಾರರ ಮಾರ್ಗದರ್ಶನದಲ್ಲಿ ಕ್ರೀಡಾಪಟುಗಳು ಇಲ್ಲಿ ತರಬೇತಿ ಪಡೆದಿದ್ದು, ಕೇರಳದಲ್ಲಿ ಜರುಗುವ ಪಂದ್ಯದಲ್ಲಿ ಕರ್ನಾಟಕ ತಂಡ ಪ್ರತಿನಿಧಿಸುವ ನೀವೆಲ್ಲ ಒಗ್ಗಟ್ಟಾಗಿ ಸಮಯೋಚಿತ ಪ್ರದರ್ಶನ ತೋರುವ ಮೂಲಕ ಗೆಲುವು ಸಾಧಿಸಿ ಶುಭ ಹಾರೈಸಿದರು.

ಸಂಸ್ಥೆಯ ಅಧ್ಯಕ್ಷ ಎನ್.ಕೆ. ಬೇವಿನಕಟ್ಟಿ ಮಾತನಾಡಿ, ಕ್ರೀಡೆಯಲ್ಲಿ ಏಕಾಂಗಿ ಹೋರಾಟ ಜಯ ನೀಡುವದಿಲ್ಲ. ಇಡೀ ತಂಡ ಒಗ್ಗಟ್ಟಾಗಿ ಏಕಾಗ್ರತೆಯಿಂದ ಆಟವಾಡಿದಲ್ಲಿ ಎಂತಹ ತಂಡವನ್ನಾದರೂ ಪರಾಭವಗೊಳಿಸುವ ಸಾಮರ್ಥ್ಯ ನಿಮ್ಮಲ್ಲಿ ಬರುತ್ತದೆ. ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ನನ್ನ ಗೆಲುವು ಎನ್ನುವುದಕ್ಕಿಂತ ನಮ್ಮ ಗೆಲುವು–ನಮ್ಮ ಆಟ ಎಂದು ಪ್ರದರ್ಶನ ನೀಡಬೇಕು ಎಂದರು.

ತಂಡಕ್ಕೆ ರಾಜ್ಯ ಅಟ್ಯಾಪಟ್ಯಾ ಸಂಸ್ಥೆಯ ಕಾರ್ಯದರ್ಶಿ ಎಲ್.ಸಿ. ಲಮಾಣಿ, ರಾಷ್ಟ್ರೀಯ ತರಬೇತುದಾರ ಕೃಷ್ಣಾ ನಡಮನಿ, ಸಂಪನ್ಮೂಲ ತರಬೇತುದಾರರಾದ ಶಿಕ್ಷಕ ವಿ.ಎ. ಕುಂಬಾರ, ಸಂಸ್ಥೆಯ ತರಬೇತುದಾರ ಮಹಮ್ಮದ ರಫೀಕ್ ರೇವಡಿಗಾರ ಶುಭ ಹಾರೈಸಿದರು.

ಈ ವೇಳೆ ಸಮಾರೋಪ ಸಮಾರಂಭದಲ್ಲಿ ಶಿಕ್ಷಕ ಆನಂದ ಕೊಂಡಿ, ವರದಿಗಾರ ಸಂಗಮೇಶ ಮೆಣಸಗಿ, ಸಣ್ಣಭೀಮಪ್ಪ ಪೂಜಾರ, ಸಂದೇಶ ದೊಡ್ಡಮೇಟಿ, ಪಿಎಸ್‌ಎಸ್ ಶಾಲೆ ಮುಖ್ಯ ಶಿಕ್ಷಕ ಸುರೇಶ ಮಲ್ಲನಗೌಡ್ರ, ಸಂಸ್ಥೆಯ ಕಾರ್ಯದರ್ಶಿ ಸಂತೋಷ ಯಳಮಲಿ, ವೀರೇಶ ಕುರಿ ಮುಂತಾದವರು ಉಪಸ್ಥಿತರಿದ್ದರು.



7ನೇ ರಾಷ್ಟ್ರೀಯ ಅಟ್ಯಾಪಟ್ಯಾ ಫೆಡರೇಷನ್ ಕಪ್‌ನಲ್ಲಿ ಸ್ಥಳಿಯ ಚೈತನ್ಯ ಕ್ರೀಡಾ ಸಂಸ್ಥೆಯ ಐದು ಕ್ರೀಡಾಪಟುಗಳು ಕರ್ನಾಟಕ ತಂಡವನ್ನು ಪ್ರತಿನಿಧಿಸಲಿದ್ದು, ಅವರಲ್ಲಿ ಭೀಮಮ್ಮ ಪೂಜಾರ, ಜ್ಯೋತಿ ಪೂಜಾರ, ಮಹೇಶ್ವರಿ ಹನಮಂತಗೌಡ್ರ, ಪ್ರೀತಿ ಬುಳ್ಳಾ ಹಾಗೂ ಸುರೇಖಾ ಕೊಂಡಿ ಆಯ್ಕೆಯಾಗಿದ್ದಾರೆ. ನರಗುಂದ ತಾಲೂಕು ವಾಸನದಿಂದ ಪ್ರಿಯಾಂಕಾ ಮಾದರ, ಹುಬ್ಬಳ್ಳಿಯಿಂದ ವೈಶಾಲಿ ದಡ್ಡಿಗೌಡರ, ಅಂಚಟಗೇರಿಯಿಂದ ಅನಿತಾ ಬಿಚಗತ್ತಿ, ಸುಶ್ಮಾ ಪಾಟೀಲ, ಅಮೂಲ್ಯಾ ಚವರಗುಡ್ಡ, ಗಳಗಿ ಹುಲಿಕೊಪ್ಪದಿಂದ ಶ್ರೀದೇವಿ ಹಡಪದ ಹಾಗೂ ಹಾವೇರಿಯಿಂದ ಕೃಪಾ ಮುಧೋಳ ಒಟ್ಟು 12 ಕ್ರೀಡಾಪಟುಗಳು ಕರ್ನಾಟಕ ತಂಡವನ್ನು ಪ್ರತಿನಿಧಿಸಲಿದ್ದಾರೆ.

### ರಸ್ತೆ ಸುರಕ್ಷತಾ ಸಪ್ತಾಹದ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಡಾ.ಚಂದ್ರು ಲಮಾಣಿ

## ರಸ್ತೆ ನಿಯಮ ಪಾಲಿಸುವುದು ಎಲ್ಲರ ಕರ್ತವ್ಯ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ರಸ್ತೆ ಸುರಕ್ಷತೆಯ ಬಗ್ಗೆ ಎಲ್ಲರೂ ಅರಿವು ಹೊಂದುವದು ಅವಶ್ಯವಾಗಿದ್ದು, ರಸ್ತೆಯ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವದು ಎಲ್ಲರ ಕರ್ತವ್ಯವಾಗಿದೆ ಎಂದು ಶಾಸಕ ಡಾ.ಚಂದ್ರು ಲಮಾಣಿ ಹೇಳಿದರು.

ಅವರು ಪಟ್ಟಣದ ಪೊಲೀಸ್ ಠಾಣೆಯ ನೇತೃತ್ವದಲ್ಲಿ ಪುರಸಭೆ ಪದವಿ ಮಹಾವಿದ್ಯಾಲಯದ ಎನ್.ಸಿ.ಸಿ ವಿದ್ಯಾರ್ಥಿಗಳು ಹಾಗೂ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ತಂಡದೊಂದಿಗೆ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ವಾಹನ ಚಲಾವಣೆ ಮಾಡುವ ಸಂದರ್ಭದಲ್ಲಿ ನಿಯಮಗಳನ್ನು ಮೀರಿ ನಡೆಯುವುದರಿಂದ ಅನೇಕ ಅವಘಡಗಳು ಸಂಭವಿಸುತ್ತವೆ. ರಸ್ತೆ ದಾಟುವಾಗ, ವಾಹನ ಚಲಾಯಿಸುವಾಗ ಜಾಗೃತರಾಗಿರುವದು ಅವಶ್ಯ. ಅಲ್ಪವಯಿಗಳು ವಾಹನ ಚಲಾಯಿಸುವದು ತಪ್ಪು ಎನ್ನುವದನ್ನು ಪಾಲಕರು ಅರಿತುಕೊಳ್ಳಬೇಕು. ನಾವೆಲ್ಲರೂ ರಸ್ತೆ ಸುರಕ್ಷತಾ ನಿಯಮಗಳ ಬಗ್ಗೆ ತಿಳಿದುಕೊಂಡು ಪೊಲೀಸ್ ಇಲಾಖೆಯ ಜೊತೆ ಕೈಜೋಡಿಸಬೇಕು ಎಂದು ಹೇಳಿದರು.

ಅಪರಾಧ ವಿಭಾಗದ ಪಿಎಸ್‌ಐ ವಿ.ಜಿ. ಪವಾರ ಮಾತನಾಡಿ, ರಸ್ತೆ ಸುರಕ್ಷತೆ ಬಗ್ಗೆ ಹೆಚ್ಚು ಅರಿವು ಮೂಡಿಸುವ ಉದ್ದೇಶದಿಂದ ರಸ್ತೆ ಸುರಕ್ಷತಾ ಸಪ್ತಾಹ ಆಚರಿಸಲಾಗುತ್ತಿದೆ. ಸಂಚಾರ ಪೊಲೀಸರು ಜಾರಿಗೆ ತಂದಿರುವ ನಿಯಮಗಳನ್ನು ಸಾರ್ವಜನಿಕರು ಕಡ್ಡಾಯವಾಗಿ ಪಾಲಿಸಬೇಕು. ರಸ್ತೆ ನಿಯಮಗಳು ಇರುವದು ನಮ್ಮ ಒಳ್ಳೆಯದಕ್ಕಾಗಿ ಎನ್ನುವದನ್ನು ತಿಳಿಯಬೇಕು. ಮದ್ಯಪಾನ ಮಾಡಿ ವಾಹನ ಚಲಾವಣೆ ಮಾಡಬೇಡಿ. ವಾಹನ ಚಾಲಕರು ಕಡ್ಡಾಯವಾಗಿ ರಸ್ತೆ ನಿಯಮ ಪಾಲಿಸುವುದರ ಮೂಲಕ ರಸ್ತೆ ಅಪಘಾತ ತಡೆಗಟ್ಟಿ ಜೀವ ರಕ್ಷಿಸಿಕೊಳ್ಳಿ. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಕಾರಿನಲ್ಲಿ ಸೀಟ್ ಬೆಲ್ಟ್ ಧರಿಸಬೇಕು. ವಾಹನದ ಇನ್ಸೂರೆನ್ಸ್ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಎಂಎ ಕಾಲೇಜ ಎನ್‌ಸಿಸಿ ಅಧಿಕಾರಿ ಎಚ್.ಎಂ. ಉಪ್ಪಾರ, ಪೊಲೀಸ್ ಸಿಬ್ಬಂದಿಗಳಾದ ಸೋಮನಾಥ ವಾಲ್ಮೀಕಿ, ಎಚ್.ಐ. ಕಲ್ಲಣ್ಣನವರ, ಎಚ್.ಎಂ. ಗೊರವರ, ರೇಣುಕಾರಾಧ್ಯ ಅಕ್ಕಿಗುಂದಮಠ, ಎಂ.ಎಂ. ಸೀಗಿಹಳ್ಳಿ ಹಾಗೂ ಎನ್‌ಸಿಸಿ ವಿದ್ಯಾರ್ಥಿಗಳು ಇದ್ದರು.




ಈ ಸಂದರ್ಭದಲ್ಲಿ ಎನ್‌ಸಿಸಿ ವಿದ್ಯಾರ್ಥಿಗಳು ಹಾಗೂ ಪೊಲೀಸರು ವಾಹನ ಸವಾರರಿಗೆ ಗುಲಾಬಿ ಹೂ ನೀಡುವ ಮೂಲಕ ಸುರಕ್ಷಾ ನಿಯಮಗಳನ್ನು ತಿಳಿಸಿದರು. ಎನ್‌ಸಿಸಿ ವಿದ್ಯಾರ್ಥಿಗಳು ಸಾರ್ವಜನಿಕರಿಗೆ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಟ್ರಾಫಿಕ್ ನಿಯಮಗಳನ್ನು ಅನುಸರಿಸಲು ತಿಳಿಸಿದರು.

## ಸುಖ, ಶಾಂತಿಯ ಬದುಕಿಗೆ ಧರ್ಮವೇ ಮೂಲ

■ವಿಜಯಸಾಕ್ಷಿ ಸುದ್ದಿ, ಧಾರವಾಡ


ಮನುಷ್ಯ ಯಾವಾಗಲೂ ಸುಖಾಪೇಕ್ಷಿ. ಸುಖದ ಮೂಲ ಧರ್ಮದಲ್ಲಿದೆ. ಜೀವನ ಉತ್ಕರ್ಷತೆಗೆ ಕಾರಣವಾಗಿರುವ ಧರ್ಮದ ಪಾಲನೆಯನ್ನು ಮಾಡಿ ಆದರ್ಶ ಬದುಕು ಕಟ್ಟಿಕೊಳ್ಳಬೇಕೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ನಗರದ ಸತ್ತೂರು ಬಡಾವಣೆಯ ಶ್ರೀ ಜಗದ್ಗುರು ದಾರುಕ ಧರ್ಮ ನಿವಾಸದಲ್ಲಿ ಜರುಗಿದ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಆಧುನಿಕ ಯುಗದಲ್ಲಿ ಮನುಷ್ಯ ಪೂರ್ವಜರ ಆದರ್ಶಗಳನ್ನು ಮರೆಯುತ್ತಿದ್ದಾನೆ. ಬುದ್ಧಿ ಬೇಕಾದಷ್ಟು ಬೆಳೆದಿದ್ದರೂ ಭಾವನೆಗಳು ಬೆಳೆಯುತ್ತಿಲ್ಲ. ಹೀಗಾಗಿ ಮನುಷ್ಯ ಜೀವನ ಅಶಾಂತಿಯಿಂದ ತತ್ತರಿಸುತ್ತಿದೆ. ದೇವರು ಧರ್ಮದಲ್ಲಿ ನಮ್ಮ ನಂಬಿಗೆ ಕಳೆದುಕೊಳ್ಳಬಾರದು. ನಂಬಿ ನಡೆದವನಿಗೆ ಎಲ್ಲವೂ ಉಂಟು. ನಂಬಿಕೆ ಇಲ್ಲದವರಿಗೆ ಧರ್ಮ ದೇವರು ಕಾಣುವುದಿಲ್ಲ. ಗುರಿ ಮತ್ತು ಗುರುವನ್ನು ಆಶ್ರಯಿಸಿ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸಬೇಕಾಗಿದೆ.

ಶ್ರೀ ಜಗದ್ಗುರು ದಾರುಕ ಧರ್ಮ ನಿವಾಸದ ಧರ್ಮಾಧಿಕಾರಿ ಹಿರೇಮಠದ ಸಿದ್ಧಲಿಂಗಯ್ಯನವರು ಮತ್ತು ಅವರ ಅಭಿಮಾನಿಗಳು ಸೇರಿ ಸಂಘಟಿಸಿದ ಈ ಕಾರ್ಯಕ್ರಮ ತಮಗೆ ತೃಪ್ತಿ, ಸಂತೋಷ ತಂದಿದೆ ಎಂದರು.

ಹಿರೇಮಠದ ರೇಣುಕ ಪ್ರಸಾದ್, ಪ್ರಕಾಶ ಬೆಂಡಿಗೇರಿ, ಶಿವಪ್ಪ ಗೆಜ್ಜಿ, ಮಂಜುನಾಥ ಮಠಪತಿ, ಅಶೋಕ ಬಡಿಗೇರ, ಶಿಪಪುತ್ರ ಕುರ್ತಕೋಟಿ ಮೊದಲಾದ ಗಣ್ಯರು ಉಪಸ್ಥಿತರಿದ್ದರು. ಕೊಟ್ರೇಶಸ್ವಾಮಿ ಸೂರಪುರಮಠ ನಿರೂಪಿಸಿದರು.



## ಸಹಾಯಧನ ಸೌಲಭ್ಯಕ್ಕೆ ಅರ್ಜಿ ಅಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಕೃಷಿ ಕ್ಷೇತ್ರದಲ್ಲಿ ನೂತನ ಪರಿಕಲ್ಪನೆಯೊಂದಿಗೆ ಆರಂಭಿಸುವ ಹೊಸ ಕೃಷಿ ನವೋದ್ಯಮಿಗಳಿಗೆ ಅನುಮೋದಿತ ಯೋಜನಾ ವರದಿಯ ಶೇ. 50ರಷ್ಟು ಸಹಾಯಧನ (ಕನಿಷ್ಠ ರೂ. 5 ಲಕ್ಷದಿಂದ ಗರಿಷ್ಠ ರೂ. 20 ಲಕ್ಷಗಳವರೆಗೆ) ಬ್ಯಾಂಕ್ ಸಾಲದ ಮುಖಾಂತರ (Backended Subsidy) ನೀಡಲಾಗುವುದು.

ಈಗಾಗಲೇ ಸ್ಥಾಪಿಸಲಾದ ನವೋದ್ಯಮಗಳ ವಿಸ್ತರಣೆಗಾಗಿ ಹಾಗೂ ಉನ್ನತೀಕರಣಕ್ಕಾಗಿ ಯೋಜನಾ ವರದಿಯ ಶೇ. 50 ರಷ್ಟು ಸಹಾಯಧನವನ್ನು (ಕನಿಷ್ಠ ರೂ. 20 ಲಕ್ಷದಿಂದ ಗರಿಷ್ಠ ರೂ. 50 ಲಕ್ಷಗಳವರೆಗೆ) ಕೃಷಿ ವಲಯದ ನವೋದ್ಯಮಿಗಳಿಗೆ ಬ್ಯಾಂಕ್ ಸಾಲದ ಮುಖಾಂತರ (Backended Subsidy) ನೀಡಲಾಗುವುದು.

ಪ್ರಸಕ್ತ 2023–24 ರ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಕೃಷಿ ಮಾರುಕಟ್ಟೆಗೆ ಸಂಬಂಧಿಸಿದ ವಲಯಗಳಲ್ಲಿ ನಾವೀನ್ಯತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೃಷಿ ಉದ್ಯಮಗಳಿಗೆ ಉತ್ತೇಜನ ನೀಡಲು "ನವೋದ್ಯಮ" ಎಂಬ ಹೊಸ ಯೋಜನೆಯನ್ನು ಸರ್ಕಾರದಿಂದ ಘೋಷಿಸಲಾಗಿದೆ.

ರೈತರು ನೂತನ ತಾಂತ್ರಿಕತೆಗಳನ್ನು ಅಳವಡಿಸುವ ಪರಿಕಲ್ಪನೆಗೆ ಹೊಂದುವಂತೆ ಹಾಗೂ ರೈತರ ಆದಾಯ ವೃದ್ಧಿಸುವಲ್ಲಿ ಸಹಕಾರಿಯಾಗುವಂತೆ ರಾಜ್ಯಾದ್ಯಂತ ಕೃಷಿ ವಲಯದಲ್ಲಿ ನೂತನ ಅವಿಷ್ಕಾರಗಳು, ನವೀನ ಉತ್ಪನ್ನಗಳು ಹಾಗೂ ಸೇವೆಗಳನ್ನು ಒಳಗೊಂಡಿರುವ ಕೃಷಿ ನವೋದ್ಯಮಗಳಿಗೆ ಉತ್ತೇಜನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಹಾಗೂ ನಿಗದಿತ ಅರ್ಜಿ ನಮೂನೆಯನ್ನು ಆಯಾ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರಿಂದ ಪಡೆಯಬಹುದು ಎಂದು ಜಂಟಿ ಕೃಷಿ ನಿರ್ದೇಶಕಿ ಶ್ರೀಮತಿ ತಾರಾಮಣಿ ಜಿ.ಎಚ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸರಕಾರಿ ನೌಕರರ ಸಂಘದಿಂದ ಪ್ರತಿಭಾ ಪುರಸ್ಕಾರ, ಸರಕಾರಿ ನೌಕರರ ವಾರ್ಷಿಕ ಮಹಾಸಭೆ

## ದೇಶದ ಭವಿಷ್ಯ ಮಕ್ಕಳ ಮೇಲೆ ಅವಲಂಬಿತವಾಗಿದೆ

■ವಿಜಯಸಾಕ್ಷಿ ಸುದ್ದಿ, ಗದಗ

ನಿರಂತರ ಶ್ರಮ, ಪ್ರಯತ್ನವೊಂದಿದ್ದರೆ ಪ್ರಸಕ್ತ ಸವಾಲಿನ ಬದುಕಿನಲ್ಲಿ, ಸಾರ್ವಜನಿಕ ವಲಯದಲ್ಲಿ ಬೇಕಾದ್ದನ್ನು ಸಾಧಿಸಬಹುದೆನ್ನುವುದಕ್ಕೆ ಶಿಕ್ಷಕ ವೃತ್ತಿಯಿಂದ ಜಿಲ್ಲಾಧಿಕಾರಿಯಾಗಿ ಉತ್ತಮ ಆಡಳಿತದೊಂದಿಗೆ ಜನಸ್ನೇಹಿಯಾಗಿರುವ ಗದಗ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರ ಆಡಳಿತಾತ್ಮಕ ವ್ಯಕ್ತಿತ್ವವೇ ಮಾದರಿಯಾಗಿದೆ ಎಂದು ಕರ್ನಾಟಕ ರಾಜ್ಯ ಸರಕಾರಿ ನೌಕರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ ಹೇಳಿದರು.

ನಗರದ ಕರ್ನಾಟಕ ರಾಜ್ಯ ಸರಕಾರಿ ನೌಕರ ಭವನದಲ್ಲಿ 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳ ಗದಗ ಜಿಲ್ಲಾಮಟ್ಟದ ಪ್ರತಿಭಾ ಪುರಸ್ಕಾರ ಮತ್ತು ಸರಕಾರಿ ನೌಕರರ ವಾರ್ಷಿಕ ಮಹಾಸಭೆಯ ಘನ ಉಪಸ್ಥಿತಿ ವಹಿಸಿ ಅವರು ಮಾತನಾಡಿದರು.

ಸಮಸ್ಯೆ ಎಂದು ಹೆದರಿದರೆ ಅದು ನಮ್ಮನ್ನು ಸಾಯಿಸುತ್ತದೆ. ಸಮಸ್ಯೆಗೆ ಪರಿಹಾರ ಕಂಡುಕೊಂಡು ಬದುಕಿದರೆ ಸಮಸ್ಯೆ ಸಾಯುತ್ತದೆ. ದೇಶದ ಭವಿಷ್ಯ ಮಕ್ಕಳ ಮೇಲೆ ಅವಲಂಬಿತವಾಗಿದೆ. ಮಕ್ಕಳು ಗುಣಾತ್ಮಕ ಶಿಕ್ಷಣದೊಂದಿಗೆ ಉಜ್ವಲ ಬದುಕು ರೂಪಿಸಿಕೊಳ್ಳಲಿ ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಸರಕಾರಿ ನೌಕರ ಸಂಘದ ಉಪಾಧ್ಯಕ್ಷ ರವಿ ಗುಂಜೀಕರ ಮಾತನಾಡಿ, ಸಿ.ಎಸ್. ಷಡಕ್ಷರಿಯವರ ನೇತೃತ್ವದಲ್ಲಿ ಸಂಘಟನೆ ಕ್ರಿಯಾಶಿಲವಾಗಿದೆ. ಈಗಾಗಲೇ ರಾಜ್ಯ ಸರಕಾರಿ ನೌಕರ ಸಂಘದ ಅವಿರತ ಹೋರಾಟದ ಫಲದಿಂದಾಗಿ ಸರಕಾರಿ ಸವಲತ್ತುಗಳ 25 ಆದೇಶಗಳನ್ನು ಹೊರಡಿಸಿರುವ ಕೀರ್ತಿಗೆ ಸಿ.ಎಸ್. ಷಡಕ್ಷರಿಯವರು ಭಾಜನರಾಗಿದ್ದಾರೆ. ನಮ್ಮ ನಿರೀಕ್ಷೆಯ ಎಲ್ಲ ಯೋಜನೆಗಳು ಅನುಷ್ಠಾನಗೊಳ್ಳುವ ವಿಶ್ವಾಸ ನಮಗಿದೆ ಎಂದರು.

ಗದಗ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಮಾತನಾಡಿ, ಸರಕಾರಿ ನೌಕರರ ಜೀವನ ನೆಮ್ಮದಿ ಮತ್ತು ಸಂತೋಷದಿಂದ ಕೂಡಿರುತ್ತದೆ ಎಂಬುದು ಸಮಾಜದ ನಿರೀಕ್ಷೆ ಆಗಿದೆ. ಸರಕಾರಿ ನೌಕರರು ಎದುರಿಸುತ್ತಿರುವ ಕರ್ತವ್ಯದ ಒತ್ತಡ ಮತ್ತು ಅವರ ಜೀವನದ ಬಗ್ಗೆ ಅವರ ಪರಿವಾರಕ್ಕೆ ಗೊತ್ತು ಎಂದರು.

ಈ ಸಂದರ್ಭದಲ್ಲಿ ರಾಜ್ಯ ಸರಕಾರಿ ನೌಕರರ ಸಂಘದ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಬಳ್ಳಾರಿ, ಹಿರಿಯ ಉಪಾಧ್ಯಕ್ಷ ಎಸ್.ಬಸವರಾಜು, ಆರ್. ಮೋಹನ ಕುಮಾರ, ರಾಜ್ಯ ಕಾರ್ಯದರ್ಶಿ ಎಸ್.ವಿ. ಸತ್ಯರೆಡ್ಡಿ, ಕೋಶಾಧ್ಯಕ್ಷ ಸತೀಶ ಕಟ್ಟಿಮನಿ, ಗೌರವಾಧ್ಯಕ್ಷ ಡಾ. ಬಸವರಾಜ ಬಳ್ಳಾರಿ, ರಾಜ್ಯ ಪರಿಷತ್ ಸದಸ್ಯರಾದ ಡಾ. ಶರಣು ಗೋಗೇರಿ, ಕೆ.ಬಿ. ಕೊಣ್ಣೂರ, ಸಿದ್ದಪ್ಪ ಲಿಂಗದಾಳ, ಎಸ್. ಎಫ್. ಸಿದ್ದನಗೌಡರ, ಪ್ರಲ್ಹಾದ ಗೆಜ್ಜಿ, ಆರ್.ಎಂ. ಹೊಲ್ತೊಕೋಟೆ, ಆರ್.ಎಸ್. ಬುರುಡಿ, ಎಸ್. ಎಸ್. ಸೋಮಣ್ಣವರ, ವಿ.ಎಂ. ಹಿರೇಮಠ, ಪಿ.ಎಚ್. ಕಡಿವಾಲ, ಎಮ್.ಕೆ. ಲಮಾಣಿ, ಕುಮಾರ ಪೂಜಾರ, ಎಂ.ಎಸ್. ಕುಚಬಾಳ, ವಸಂತ ಕಲಕಂಬಿ, ಜಗದೀಶ ಮಡಿವಾಳರ, ನಾಗರಾಜ ಹಳ್ಳಿಕೇರಿ, ಶರಣಗೌಡ ಪಾಟೀಲ, ಡಾ. ಎಮ್.ವಿ. ಹಾದಿಮನಿ, ಡಿ.ಎಚ್. ಪಾಟೀಲ್, ಆನಂದ ಬನಪ್ಪಣ್ಣವರ, ವಿವಿಧ ಇಲಾಖೆಗಳ ನೌಕರ ಸಂಘದ ಪದಾಧಿಕಾರಿಗಳು, ನೌಕರ ವರ್ಗದವರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿದ್ದರು.



ಸರಕಾರಿ ನೌಕರ ಸಂಘ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ ಅವರ ನೇತೃತ್ವದಲ್ಲಿ ಆರಂಭಗೊಂಡ ಸರಕಾರಿ ನೌಕರ ಮಕ್ಕಳ ಪ್ರತಿಭಾ ಪುರಸ್ಕಾರ ಸಮಾರಂಭ ಪ್ರಾರಂಭವಾಗಿ ಇಂದಿಗೆ 5 ವರ್ಷಗಳು ಗತಿಸಿವೆ. ಈ ಸಮಾರಂಭದ ಮೂಲಕ ಒಟ್ಟಾರೆ 8 ಸಾವಿರ ಮಕ್ಕಳು ಸತ್ಕಾರ–ಗೌರವವನ್ನು ಪಡೆದಿದ್ದಾರೆ. ಉತ್ತಮ ಶೈಕ್ಷಣಿಕ ಮಾರ್ಗದಲ್ಲಿ ಸಾಗಲು ಇದೊಂದು ಪ್ರೇರಣೆಯಾಗಿದೆ.

**– ರವಿ.ಎಲ್.ಗುಂಜೀಕರ.**

ರಾಜ್ಯ ಉಪಾಧ್ಯಕ್ಷರು, ಸರಕಾರಿ ನೌಕರ ಸಂಘ.

**ಕರ್ನಾಟಕ ಸರ್ಕಾರ (ಪೌರಾಡಳಿತ ಇಲಾಖೆ)**

**ಪಟ್ಟಣ ಪಂಚಾಯತ ಕಾರ್ಯಾಲಯ, ಮುಳಗುಂದ ಜಿಲ್ಲಾ : ಗದಗ**

ಸಂ:ಪಪಂಮು/ತಾಂ.ವಿ./15ನೇ ಹಣಕಾಸು./ಟೆಂಡರ/ವಹಿ–/2023–24

ದಿನಾಂಕ : 16–01–2024

**ಅಲ್ಪಾವಧಿ ಟೆಂಡರ ಪ್ರಕಟಣೆ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರಮೇಂಟ್ ಮೂಲಕ**

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಮುಳಗುಂದ ಇವರಿಂದ ಮುಳಗುಂದ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ–2000ರ ಪ್ರಕಾರ "ಕರ್ನಾಟಕ ಪಬ್ಲಿಕ್ ಪ್ರೋಕ್ಯೂರಮೆಂಟ್ ಪೋರ್ಟಲ್" ಪದ್ಧತಿಯಲ್ಲಿ ಸನ್.2023–24ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನದಡಿ **ಇಂಡೆಂಟ ನಂಬರಗಳ ಸಂಖ್ಯೆಗಳು–12667, 12672, 12680 ಮತ್ತು 12777** ನೇದ್ದರ ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಡಬ್ಲ್ಯೂ.1/2/3 ದಸ್ತಾವೇಜನಲ್ಲಿ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಚಾಲ್ತಿ ಸಾಲಿನ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರಮೆಂಟ ದಾಖಲೆಗಳಿಗಾಗಿ **http://kppp.karnataka.gov.in** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವದು.

(1) ಇ–ಪ್ರೋಕ್ಯೂರಮೆಂಟ್ ಪದ್ಧತಿಯಲ್ಲಿ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **23–01–2024** ಸಂಜೆ 4.00 ಗಂಟೆಗೆ (2) ಇ–ಪ್ರೋಕ್ಯೂರಮೆಂಟ್ ಪದ್ಧತಿಯಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ : **24–01–2024** ಸಂಜೆ 4:30 ಗಂಟೆಗೆ

ನಿಗಧಿ ಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವದು. ಯಾವುದೇ ತಿದ್ದುಪಡಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ ಕಾಮಗಾರಿ ಇ.ಎಂ.ಡಿ. ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಛೇರಿಯ ವೆಬ್‌ಸೈಟ್ **http://www.mulagundatown.mrc.gov.in** ಹಾಗೂ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ–ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ ಮಂಜೂರ ವ ನಾಮಂಜೂರ ಮಾಡುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

**ಸಹಿ/– (ಶ್ರೀ.ಮಂಜುನಾಥ ಪಿ ಗುಳೇದ)**
**ಮುಖ್ಯಾಧಿಕಾರಿ**
**ಪಟ್ಟಣ ಪಂಚಾಯತ,**
**ಮುಳಗುಂದ**

**ಸಹಿ/– (ಶ್ರೀನಿವಾಸಮೂರ್ತಿ ಕುಲಕರ್ಣಿ)**
**ಆಡಳಿತಾಧಿಕಾರಿಗಳು**
**ಪಟ್ಟಣ ಪಂಚಾಯತ ಮುಳಗುಂದ**
**ತಹಶೀಲ್ದಾರ ಹಾಗೂ ತಾಲೂಕಾ**
**ದಂಡಾಧಿಕಾರಿಗಳು ಗದಗ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/465/2023–24

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka